ಐಕ್ಯರಂಗ

ವಾರಪತ್ರಿಕೆ

ಭಾರತಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 46 | ನವೆಂಬರ್ 11, 1984 | ಬೆಲೆ 60 ಪೈಸೆ.

ದೇಶದ ಸಮಗ್ರತೆಗೆ ಅಪಾಯಕಾರಿಯಾದ ಸಾಮ್ರಾಜ್ಯಶಾಹಿ ಏಜಂಟರನ್ನು ನಾಶಮಾಡಿರಿ

ನಿರಪರಾಧಿ ಜನರ ಹತ್ಯಾಕಾಂಡ ನಿಲ್ಲಲಿ

ತನ್ನ ರಕ್ಷಣೆ ಮಾಡಬೇಕಾದ ಭದ್ರತಾ ಪಡೆಯ ಸಮವಸ್ತ್ರಧಾರಿ ಸಬ್ ಇನ್‌ಸ್ಪೆಕ್ಟರ್ ಬಿಯಾಂತ್‌ಸಿಂಗ್ ಮತ್ತು ಕಾನ್‌ಸ್ಟೆಬಲ್ ಸತ್‌ವಂತಸಿಂಗ್ ಅವರು ಇಂದಿರಾ ಗಾಂಧಿಯನ್ನು ಗುಂಡು ಹಾರಿಸಿ ಕೊಂದು ಹಾಕಿದರು. ಹದಿನಾರಕ್ಕೂ ಹೆಚ್ಚು ಗುಂಡುಗಳು ಇಂದಿರಾ ಶರೀರ ಹೊಕ್ಕಿದ್ದವು. ರಕ್ಷಕರೇ ಭಕ್ಷಕರಾಗುವಂಥ ಘಟನೆ ಅಪರೂಪ. ನರಗುಂದದಂಥ ಬಂಡಾಯಗಳು ಬ್ರಿಟಿಷರ. ವಿರುದ್ಧ ನಡೆದಾಗ ನಮ್ಮವರೇ ಬ್ರಿಟಿಷರ ಸಹಾಯಕರಾಗಿ ದ್ರೋಹ ಬಗೆದ ಹಲವಾರು ಉದಾಹರಣೆಗಳಿವೆ. ಆದರೆ ಇತ್ತೀಚೆಗಿನ ವರ್ಷಗಳಲ್ಲಿ ಅಂಥ ದ್ರೋಹ ಕೃತಿಗಳು ವಿರಳವೆಂದೇ ಹೇಳಬಹುದು.

ಆದರೆ ಇತ್ತೀಚೆಗಿನ ಕೆಲವು ವರ್ಷಗಳಿಂದ ಅಮೇರಿಕನ್ ಸಾಮ್ರಾಜ್ಯಶಾಹಿಗಳು, ಕ್ರಿಶ್ಚಿಯನ್ ಮಿಶಿನರಿಗಳೆಲ್ಲ ಭಾರತ ದೇಶದ ಐಕ್ಯತೆಯನ್ನು ಭಂಗಗೊಳಿಸುವ, ದೇಶವನ್ನು ವಿಭಜಿಸುವ, ತುಂಡು ಮಾಡುವ ಹಂಚಿಕೆಯಲ್ಲಿದ್ದಾರೆ. ಕಾಂಗ್ರೆಸ್ಸಿನ ಆಳ್ವಿಕೆಯಿಂದಾಗಿ ಅಸಮಾಧಾನಗೊಂಡ ಜನರನ್ನು ಸಾಮ್ರಾಜ್ಯಶಾಹಿಗಳು ಅಧಿಕಾರದ ಹಣದ ಆಸೆ ತೋರಿಸಿ ದೇಶದ ಸಾರ್ವಭೌಮತ್ವಕ್ಕೆ-ಐಕ್ಯತೆಗೆ ಮುಳುವಾಗುವ ಭೀಕರ ಕುತಂತ್ರ, ಒಳಸಂಚು ನಡೆಸುತ್ತಿದ್ದಾರೆಂಬ ಎಚ್ಚರಿಕೆಯನ್ನು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿ ಈ ಮುಂಚೆಯೇ ಸರಕಾರ ಹಾಗೂ ದೇಶದ ಜನತೆಗೆ ಕೊಟ್ಟಿತು. ಅಸ್ಸಾಂ, ಮಿಜೋರಾಂ, ಗಳಲ್ಲಿ ವಿದೇಶೀಯರ, ಸ್ವಾಯತ್ತತೆಯ ಸಮಸ್ಯೆಗಳನ್ನುಂಟು ಮಾಡಿ ಗಡಿ ಪ್ರದೇಶದಲ್ಲಿ ಅಧಿಕಾರವನ್ನೇ ಅಸ್ತವ್ಯಸ್ಥಗೊಳಿಸಲಾಗಿತ್ತು. ತ್ರಿಪುರ, ಮಣಿಪುರ, ಮಿಝೋರಾಜಂ, ಮೇಘಾಲಯ, ಸಿಕ್ಕಿಂ, ಅಸ್ಸಾಂಗಳನ್ನೊಳಗೊಂಡ ಏಳು ಸಹೋದರಿಯರ ಪ್ರತ್ಯೇಕ ರಾಜ್ಯ ಕಟ್ಟುವ ಕನಸನ್ನು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪ್ರಚಾರಗೊಳಿಸಿದ್ದರು. ಅದನ್ನು ಕಾರ್ಯ ರೂಪದಲ್ಲಿ ತರಲು ಸಾಕಷ್ಟು ಪ್ರಯತ್ನ ನಡೆಸಿದ್ದರು. ಸಿಪಿಐ [ಎಂ] ಈ ಒಳಸಂಚವನ್ನು ಬಹಿರಂಗಗೊಳಿಸಿತ್ತು

ಅಕಾಲಿಗಳು ಪ್ರತ್ಯೇಕ ಜನಾಂಗ, ಆದ್ದರಿಂದ ಅವರದೇ ಆದ ಖಲಿಸ್ಥಾನ ರಾಜ್ಯವಾಗಬೇಕೆಂಬ ಘೋಷಣೆಗೆ ಪ್ರಚೋದನೆ ನೀಡಿದವರೂ ಅದೇ ಸಾಮ್ರಾಜ್ಯಶಾಹಿಗಳು.

ಭಾರತ ದೇಶ ತನ್ನ ರಾಜಕೀಯ, ಆರ್ಥಿಕ ಬಲೆಯಲ್ಲಿ ಬೀಳುತ್ತಿಲ್ಲ, ಸಮತಾವಾದಿ ದೇಶಗಳ ಕಡೆ ಕೆಲವು ವಿಷಯಗಳಲ್ಲಿ ವಾಲುತ್ತಿದೆ, ತಟಸ್ಥ ನೀತಿಯನ್ನನುಸರಿಸುತ್ತಿದೆ, ಸಮತಾವಾದಿ ದೇಶಗಳ ಸುತ್ತ ತಾನು ರಚಿಸುತ್ತಿರುವ ಮಿಲಿಟರಿ ಚಕ್ರವ್ಯೂಹದಲ್ಲಿ ಭಾರತ ಪಾಲ್ಗೊಳ್ಳುತ್ತಿಲ್ಲ,

ಯುದ್ಧವನ್ನು ವಿರೋಧಿಸಿ, ಶಾಂತಿಗಾಗಿ ಹೋರಾಡುತ್ತಿದೆಂಬ ಕಾರಣದಿಂದ, ಭಾರತವನ್ನು ರಾಜಕೀಯವಾಗಿಯೂ ಆರ್ಥಿಕವಾಗಿಯೂ, ಅಸಮತೋಲ ಬೆಳವಣಿಗೆಯಿಂದಾಗಿ ಬೆಳೆದು ಬರುತ್ತಿರುವ ಜನರ ಅಸಂತೋಷವನ್ನು ಪಯೋಗಿಸಿಕೊಂಡು, ಜಾತೀಯ, ಮತೀಯ, ಛಿದ್ರಕಾರಿ ಶಕ್ತಿಗಳಿಗೆಲ್ಲ ಸರ್ವ ವಿಧದ ಪ್ರಚೋದನೆ-ಸಹಾಯ ನೀಡಿ ಗಡಿ ಪ್ರದೇಶಗಳಲ್ಲಿ ದೇಶದ್ರೋಹೀ ವಿಭಜನಕಾರಿ ಚಟುವಟಿಕೆಗಳನ್ನು ನಡೆಸುತ್ತಿದೆ ಅಮೇರಿಕ. ಆದ್ದರಿಂದ ಅಸ್ಸಾಂ ಪಂಜಾಬ್‌ಗಳಂಥ ಸಮಸ್ಯೆಗಳನ್ನು ತಡಮಾಡದೆ ರಾಜಕೀಯವಾಗಿ ದೃಢ ನಿಲುಮೆ ತಾಳಿ ಕೂಡಲೇ ಬಗೆಹರಿಸಿ, ಛಿದ್ರಕಾರಿ ಶಕ್ತಿಗಳನ್ನು ಪ್ರತ್ಯೇಕಿಸಿ ಸದೆಬಡೆಯಬೇಕೆಂದೂ, ಇಲ್ಲವಾದರೆ ದೇಶದ ಸಮುಗ್ರತೆಗೆ ಅಪಾಯವಿದೆಂದೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಪದೇ ಪದೇ ಎಚ್ಚರಿಸುತ್ತಾ ಬಂದಿದೆ. ಆದರೆ ದೇಶದ ಸಮುಗ್ರತೆಗಿಂತಲೂ ತನ್ನ ಅಧಿಕಾರವೇ ಪ್ರಾಮುಖ್ಯವೆಂದು ತಿಳಿದಿದ್ದ ಇಂದಿರಾ ಗಾಂಧಿ ಛಿದ್ರಕಾರಿ, ಮತೀಯ, ಜಾತೀಯ, ಶಕ್ತಿಗಳಿಗೆ ಪ್ರೋತ್ಸಾಹ ನೀಡುವ ರೀತಿಯಲ್ಲಿಯೇ ಅವರಲ್ಲಿ ಕೆಲವರನ್ನು ಪಯೋಗ ಮಾಡಿಕೊಂಡು ಸಮಸ್ಯೆಗಳನ್ನು ತುರ್ತಾಗಿ ಬಗೆಹರಿಸದೆ, ಅಂಥ ಗಂಡಾಂತರ ಕಾ೯ ಶಕ್ತಿಗಳಿಗೆ ತಮ್ಮ ಚಟುವಟಿಕೆ ಮುಂದುವರಿಸಲು ಅನುಕೂಲ ಮಾಡಿ ಕೊಡುತ್ತಿದ್ದರು. ಅಸ್ಸಾಂ-ಪಂಜಾಬ್ ಸಮಸ್ಯೆಗಳು ಇದಕ್ಕೆ ಜೀವಂತ ಉದಾಹರಣೆಗಳು. ಸಿಪಿಐ [ಎಂ] ಮತ್ತು ಇತರ ವಿರೋಧ ಪಕ್ಷಗಳ ಸಲಹೆಗಳನ್ನು ಪರಿಗಣಿಸದೆ, ಸಮಸ್ಯೆ ಬೆಳೆಯುವಂತೆ ಮಾಡಿ, ಕೊನೆಗೆ ಮಿಲಿಟರಿ ಸಹಾಯದಿಂದ ಸುವರ್ಣ ಮಂದಿರವನ್ನು ಪ್ರವೇಶಿಸಿ, ಅನಂತರ ಕೂಡ ತನ್ನದೇ ಆದ ರೀತಿಯಲ್ಲಿ ವರ್ತಿಸಿ, ಸೀಖ್ ಜನರಲ್ಲಿ ಅಸಂತೋಷ ಹಬ್ಬುವಂತೆ ಮಾಡಿದರು.

ಸೀಖ್ ತೀವ್ರವಾದಿಗಳಿಂದ ಹಿಂದೂ ವಿರೋಧಿ, ಪ್ರತ್ಯೇಕತಾವಾದಿ ಚಳುವಳಿ ಹಿಂಸಾತ್ಮಕವಾಗಿಯೇ ಮುಂದುವರಿದಿದೆ ಸ್ವರ್ಣಮಂದಿರಕ್ಕೆ ಸೈನಿಕರ ಪ್ರವೇಶದಿಂದಾಗಿ ಅಸಮಾಧಾನ ಮತ್ತಷ್ಟು ತೀವ್ರಗೊಂಡಿದೆಂಬುದನ್ನು ತಿಳಿದೂ ಕೂಡ ತಿಳಿ ವಾತಾವರಣ ಉಂಟು ಮಾಡಲಿಕ್ಕಾಗಲೀ, ತನ್ನ ರಕ್ಷಣೆಯನ್ನು ಭದ್ರಗೊಳಿಸಲಿಕ್ಕಾಗಲೀ ಇಂದಿರಾ ಗಾಂಧಿ ಗಮನವಹಿಸದಿದ್ದು ದುರ್ಲಕ್ಷ್ಯ. ಬುಧುವಾರ ದಿವಸ ಅಂದರೆ ಹತ್ಯೆಯಾದ ದಿನ, ಹತ್ಯೆಯಾಗುವ ಸಂಭವವಿದೆಂಬ ಸಂಶಯದ ವಾರ್ತೆಯನ್ನು ರಕ್ಷಣಾ ಸಿಬ್ಬಂದಿಗೆ ತಿಳಿಸಲಾಗಿತ್ತಂತೆ. ಆ ಕಾರಣದಿಂದಲೇ ಆ ದಿವಸ ಸಾರ್ವಜನಿಕ ಭೆಟಿಯ ಕಾರ್ಯಕ್ರಮವನ್ನೂ ರದ್ದುಪಡಿಸಲಾಗಿತ್ತಂತೆ. ಈ ರೀತಿಯ ಎಚ್ಚರಿಕೆಯಿದ್ದರೂ ಕೂಡ ಸ್ಟನ್‌ಗನ್ ಹೊಂದಿದ ಒಬ್ಬ ರಕ್ಷಕನನ್ನು ಯಾರೂ ಗುರ್ತಿಸದಿರುವುದು ಆಶ್ಚರ್ಯ.

(8ನೇ ಪುಟ ನೋಡಿ)

67ನೇ ಕ್ರಾಂತಿ ದಿನಾಚರಣೆ

ಸೋವಿಯತ್ ಜನತೆಗೆ ಹಾರ್ದಿಕ ಶುಭಾಶಯಗಳು

ಚರಿತ್ರಾರ್ಹವಾದ 67 ನೆಯ ನವಂಬರ್ ಕ್ರಾಂತಿಯನ್ನಾಚರಿಸುತ್ತಿರುವ ಸಂದರ್ಭದಲ್ಲಿ ಸೋವಿಯತ್ ಯೂನಿಯನ್ನಿನ ಕಮ್ಯುನಿಸ್ಟ್ ಪಾರ್ಟಿಗೆ ಹಾಗೂ ರಷ್ಯಾ ದೇಶದಜನತೆಗೆ ನಾವು ಹಾರ್ದಿಕ ಸ್ವಾಗತ ಬಯಸುತ್ತೇವೆ.

ಸೋವಿಯತ್ ಕಮ್ಯುನಿಸ್ಟ್ ಪಾರ್ಟಿಯ ನೇತೃತ್ವದಲ್ಲಿ ರಷ್ಯಾ ದೇಶದ ಜನತೆ ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲಿ ಅಪಾರ ಮುನ್ನಡ ಸಾಧಿಸಿರುವುದಕ್ಕಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿ ತನ್ನ ಅಬಿನಂದನೆಗಳನ್ನು ಸಲ್ಲಿಸುತ್ತದೆ.

ಹಿಂದಿನ ಆರ್ಥಿಕ ಬಿಕ್ಕಟ್ಟಿನ ಹೊಡೆತದಿಂದಾಗಿ ಮುಗ್ಗರಿಸಿರುವ ಆರ್ಥಿಕ ಪರಿಸ್ಥಿತಿಯಿಂದ ಇನ್ನೂ ಚೇತರಿಸಿಕೊಳ್ಳದಿರುವ ಮುಂದುವರಿದ ಬಂಡವಾಳಶಾಹಿ ರಾಷ್ಟ್ರಗಳಿಗೆ ಇದು ತೀರಾ ವ್ಯತಿರಿಕ್ತವಾಗಿದೆ.

ಬಂಡವಾಳಶಾಹಿ ದೇಶಗಳ ರಸ್ತೆ ತುಂಬ ಕೋಟಿಗಟ್ಲೆ ನಿರುದ್ಯೋಗಿಗಳು ಅಲೆಯುತ್ತಿರುವಾಗ, ಅರ್ಧಶತಮಾನಕ್ಕೆ ಮುಂಚಿತವಾಗಿಯೇ ಸೋವಿಯತ್ ರಷ್ಯಾ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿದೆ. ಕೈಗಾರಿಕಾ ಮತ್ತು ತಾಂತ್ರಿಕ ಕ್ರಾಂತಿ ಬಂಡವಾಳಶಾಹಿ ದೇಶಗಳಲ್ಲಿ ಲಕ್ಷಾವಧಿ ನೌಕರರನ್ನು ಕೊಲೆಮಾಡುತ್ತಿರುವಾಗ, ಸೋವಿಯತ್ ದೇಶದಲ್ಲಿ ಅದರ ಅಭಿವೃದ್ಧಿಯು ನೌಕರಿಯ ಭದ್ರತೆಗೆ ಧಕ್ಕೆ ಉಂಟು ಮಾಡಿಲ್ಲ; ಅಷ್ಟೇ ಅಲ್ಲದೆ ಪ್ರತಿಯೊಬ್ಬನಿಗೂ ಕೆಲಸದ ಹಕ್ಕನ್ನು ಖಾತ್ರಿಗೊಳಿಸಿದೆ.

ಯಾವುದೇ ತರದ ಆರ್ಥಿಕ ಬಿಕ್ಕಟ್ಟಿಗೆ ಬಲಿಯಾಗದೆ, ರಷ್ಯಾ ದೇಶದ ರಾಷ್ಟ್ರಿಯ ಉತ್ಪನ್ನ ನಿರಾತಂಕವಾಗಿ ಮುಂದುವರಿದಿದೆ. ಅಮೇರಿಕದಲ್ಲಿ ಅದು ಶೇ 6 ರಷ್ಟು ಹೆಚ್ಚಿದಾಗ, ರಷ್ಯಾ ದೇಶದಲ್ಲಿ ಅದು 19 ರಷ್ಟು ಜಾಸ್ತಿಯಾಗಿದೆ. ಕೈಗಾರಿಕಾ ಉತ್ಪನ್ನ ಅಮೇರಿಕದಲ್ಲಿ ಶೇ 9 ರಷ್ಟು ಕಡಿಮೆಯಾದಾಗ ರಷ್ಯಾದಲ್ಲಿ ಅದು ಶೇ 18 ರಷ್ಟು ಹೆಚ್ಚಾಗಿದೆ. ಕಾರ್ಮಿಕರ ಉತ್ಪಾದನೆ ರಷ್ಯಾದಲ್ಲಿ 14 ರಷ್ಟು ಹೆಚ್ಚುತ್ತಿರುವಾಗ ಅಮೆರಿಕದಲ್ಲಿ ಬರೇ ಶೇ 3 ರಷ್ಟು ಜಾಸ್ತಿಯಾಗಿದೆ.

ಅಮೆರಿಕನ್ ಸಾಮ್ರಾಜ್ಯಶಾಹಿ ಅತಿ ಕ್ರೂರ ಯುದ್ಧದ ತಯಾರಿ ನಡೆಸುತ್ತಿರುವಾಗ ಅದನ್ನು ಸಮರ್ಥವಾಗಿ ಎದುರಿಸುವ ಸಲುವಾಗಿ ಬಹಳಷ್ಟು ಸಂಪನ್ಮೂಲಗಳನ್ನು ರಕ್ಷಣೆ ತಯಾರಿಗಾಗಿ ಖರ್ಚುಮಾಡುತ್ತಿರುವಾಗಲೂ, ರಷ್ಯಾದೇಶ ಮತ್ತು ಅಲ್ಲಿಯ ಜನತೆ ಇಂಥ ಅಭೂತ ಮುನ್ನಡೆ ಸಾಧಿಸಿರುವುದು ಪ್ರಶಂಸನೀಯ.

ಸಮತಾವಾದಿ ಪದ್ಧತಿಯ ಮೇಲ್ಮೆಯ್ಯನ್ನು ಮತ್ತೊಮ್ಮೆ ತೋರಿಸಿ ಕೊಟ್ಟಂತಾಗಿದೆ. ಸಾಮ್ರಾಜ್ಯಶಾಹಿ ದೇಶಗಳ ಆರ್ಥಿಕತೆ ಯುದ್ಧ ತಯಾರಿಕೆಯ ಆಯುವ್ಯಯದಿಂದ ತುಂಬಿದೆ. ಸಂಪನ್ಮೂಲಗಳ ದಿಸೆಯನ್ನು ಬೇರೆಡೆಗೆ ತಿರುಗಿಸಿದರೂ ಕೂಡ ಸಮತಾವಾದಿ ಆರ್ಥಿಕತೆ ಮುಂದುವರಿಯುತ್ತಾ ಇದೆ.

ಅಣುಯುದ್ಧದ ಗಂಡಾಂತರದಿಂದ ಮಾನವತೆಯನ್ನು ಜಗತ್ತಿನ ಶಾಂತಿಯನ್ನೂ ಕಾಪಾಡುವುದಕ್ಕಾಗಿ ಸೋವಿಯತ್ ರಷ್ಯಾ ಮತ್ತು ಕಮ್ಯುನಿಸ್ಟ್ ಪಕ್ಷ ಸತತ ನಡೆಸುತ್ತಿರುವ ಪ್ರಯತ್ನವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಪ್ರಶಂಸಿಸುತ್ತದೆ. ಶಾಂತಿಗಾಗಿ ರಷ್ಯಾದೇಶದ ಮುಂದೆ ಮಾಡುವ ಪ್ರತಿಯೊಂದು ಸೂಚನೆಯೂ ಮಾನವತೆಯನ್ನು ಉಳಿಸುವುದರ ಸಲುವಾಗಿಯೇ ಆಗಿರು ಆಗಿರುತ್ತದೆ. ಬಾಹ್ಯಾಕಾಶದ ಯುದ್ಧ ಯಾರಿಕೆಗೆ ವಿರೋಧ, ಎಲ್ಲ ಅಣ್ವಸ್ತ್ರಗಳನ್ನು ಪ್ರತಿ ಬಂಧಿಸುವ ಸಲುವಾಗಿ ಅಣ್ವಸ್ತ್ರಗಳ ನಿರ್ವೀಕರಣ ಪ್ರಥಮವಾಗಿ ತಾನೇ ಅಣು ಯುದ್ಧ ಪ್ರಾರಂಭಿಸುತ್ತೆವೆಂಬುದರ ನಿವಾರಣೆ ನಿಷ್ಠೆಯಿಂದ ಫಲದಾಯಕವಾಗಿ ಚರ್ಚೆ ಮಾಡಲು ಸಿದ್ಧವೆಂಬ ರಷ್ಯಾ ದೇಶದ ಸೂಚನೆಯನ್ನು ಜಗತ್ತಿನಲ್ಲಿ ಶಾಂತಿ ಬಯಸುವ ಪುರೋಗಾಮಿ ಶಕ್ತಿಗಳೆಲ್ಲ ಸ್ವಾಗತ ಮಾಡಿವೆ. ಇಂಥ ನಿರಂತರ ಶಾಂತಿ ಚಳುವಳಿಯಿಂದಾಗಿ ಯುದ್ಧಖೋರರ ಪ್ರಯತ್ನಕ್ಕೆ ತಡೆಯುಂಟಾಗಿದೆ.

[8ನೇ ಪುಟ ನೋಡಿ]

ದೇಶದಲ್ಲಿ ಹೊಸ ರಾಜಕೀಯ ಪಕ್ಷ—ಡಿ. ಎಂ. ಕೆ. ಪಿ.

ಕಾಂಗ್ರೆಯ ಸರ್ವಾಧಿಕಾರದ ವಿರುದ್ಧ ಶಕ್ತಿಗಳನ್ನೆಲ್ಲ ಒಂದುಗೂಡಿಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸತತವಾಗಿ ಪ್ರಯತ್ನ ಮಾಡುತ್ತಾ ಬಂದಿದೆ. ಕಾಂಗ್ರೆಸ್ [ಐ] ಪಕ್ಷ ಮತ್ತು ಸರ್ಕಾರ ಇಡೀ ದೇಶವನ್ನೇ ಭೀಕರ ಪರಿಸ್ಥಿತಿಯಲ್ಲಿ ಒಡ್ಡುತ್ತಿರುವಾಗ ಈ ಶಕ್ತಿಗಳನ್ನೆಲ್ಲ ಒಟ್ಟಾಗಿ ಸೇರಿಸುವುದು ತುರ್ತಿನ ಕರ್ತವ್ಯವಾಗಿದೆ.

ಒಂದು ವರ್ಷದ ಹಿಂದೆ ಜನತಾ ಪಕ್ಷ, ಕಾಂಗ್ರೆಸ್ (ಎಸ್) ಮತ್ತಿನ್ನಿತರ ಪಕ್ಷಗಳ ಸಂಯುಕ್ತರಂಗ ರಚನೆಯಾದಾಗ, ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯು ಅದನ್ನು ಸ್ವಾಗತ ಮಾಡಿತ್ತು. ಯಾಕಂದರೆ ಕಾಂಗ್ರೆ ಮತ್ತು ಅದರ ಧೋರಣೆಗಳನ್ನು ಸೋಲಿಸುವುದರ ಸಲುವಾಗಿ ಜಾತ್ಯಾತೀತ ಪಕ್ಷಗಳು ಆ ರೀತಿಯಲ್ಲಿ ಐಕ್ಯ ಸಾಧಿಸುವುದು ಅಗತ್ಯವಾಗಿದೆ.

ಜಾತ್ಯಾತೀಯ ಪಕ್ಷಗಳನ್ನು ಒಂದೆಡೆ ಗೂಡಿಸುವಲ್ಲಿ, ಆ ರೀತಿ ಕೂಡಿದ ಸಭೆಗಳಲ್ಲಿ ನಮ್ಮ ಪಕ್ಷ ಪ್ರಮುಖ ಪಾತ್ರ ವಹಿಸಿದೆ. ಶ್ರೀನಗರ ಮತ್ತು ಕಲ್ಕತ್ತದ ಸಭೆಗಳಲ್ಲಿ ಕೇಂದ್ರ ರಾಜ್ಯ ಸಂಬಂಧ, ಜನರನ್ನೆದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಹನ್ನೊಂದು ಅಂಶಗಳ ಕಾರ್ಯಕ್ರಮಗಳನ್ನು ಜನರ ಮಧ್ಯೆ ಕೊಂಡೊಯ್ಯಲು ಸಾಧ್ಯವಾಯಿತು.

ಸರ್ವಾಧಿಕಾರಿ ಪರ ಚಟುವಟಿಕೆ ತೀವ್ರಗೊಳ್ಳುತ್ತಿದೆ. ಜಮ್ಮು-ಕಾಶ್ಮೀರ ಆಂಧ್ರ ಪ್ರದೇಶದ ಚುನಾಯಿತ ಸರಕಾರಗಳನ್ನು ಉರುಳಿಸುವುದರಲ್ಲಿ ಅದು ಪ್ರತ್ಯಕ್ಷ ಕಂಡು ಬಂದಿದೆ. ಒಂದು ಚುನಾವಣೆಯಲ್ಲಿ ಬಹುಸಂಖ್ಯೆಯಲ್ಲಿ ಆರಿಸಿ ಬಂದು ಸರಕಾರ ರಚಿಸುವ ಮೂಲಭೂತ ಪ್ರಜಾಪ್ರಭುತ್ವ ಹಕ್ಕನ್ನು ವಿರೋಧ ಪಕ್ಷಗಳಿಗೆ ನಿರಾಕರಿಸಲಾಗಿದೆ.

ಸಿ. ಪಿ. ಐ (ಎಂ) ಮುಖಂಡತ್ವದಲ್ಲಿ ಎರಡು ರಾಜ್ಯಗಳಲ್ಲಿ ಸರಕಾರವಿದೆ. ಅಲ್ಲಿ ಹಣ—ಅಧಿಕಾರ ಲಾಲಸೆಗಳ ಮೂಲಕ ಸರಕಾರ ಉರುಳಿಸಲು ಸಾಧ್ಯವಿಲ್ಲದಿರುವುದರಿಂದ, ಆ ಎರಡೂ ರಾಜ್ಯಗಳಲ್ಲಿ ಕಾಂಗ್ರೆ ಗೂಂಡಾ ಜನರ ಸಹಾಯದಿಂದ ಕಾಯ್ದೆ ಕಾನೂನಿನ ಸಮಸ್ಯೆ ಉಂಟುಮಾಡುತ್ತಿದೆ. ಧನ ಸಹಾಯ ನಿರಾಕರಿಸಲಾಗುತ್ತಿದೆ. ಕೈಗಾರಿಕಾಭಿವೃದ್ಧಿಯನ್ನು ತಡೆಯಲಾಗುತ್ತಿದೆ. ರೈತ—ಕಾರ್ಮಿಕರಿಗೆ ಅನುಕೂಲವಾಗುವಂಥ ಮಸೂದೆಗಳಿಗೆ ರಾಷ್ಟ್ರಾಧ್ಯಕ್ಷರ ಅನುಮತಿ ನಿರಾಕರಿಸಲಾಗುತ್ತಿದೆ. ಇಂಥ ಪ್ರಜಾಪ್ರಭುತ್ವ ವಿರೋಧಿ ನೀತಿಯಿಂದಾಗಿ ಎಡರಂಗ ಸರಕಾರಗಳು ಜನಪರವಾದ ಕಾರ್ಯಕ್ರಮಗಳನ್ನು ಅನುಷ್ಠಾನದಲ್ಲಿ ತರಲು ಅಡ್ಡಿ ಒಡ್ಡಲಾಗುತ್ತಿದೆ.

ಸಂವಿಧಾನಾತ್ಮಕ ಪದ್ಧತಿಯನ್ನೇ ನಾಶಮಾಡಿ ಅಧ್ಯಕ್ಷೀಯ ಪದ್ಧತಿಯನ್ನು ಅನುಷ್ಠಾನದಲ್ಲಿ ತರಲು ಸತತ ಪ್ರಯತ್ನ ನಡೆದಿದೆ.

ಬೆಲೆ ಏರಿಕೆ, ನಿರುದ್ಯೋಗಗಳ ವಿರುದ್ಧ ಜನತೆ ತೀವ್ರ ಹೋರಾಟ ನಡೆಸುತ್ತಿರುವಾಗ ಅವುಗಳನ್ನು ಹತ್ತಿಕ್ಕಲು ದಮನಕಾರಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಇಂಥ ಪರಿಸ್ಥಿತಿಯಲ್ಲಿ ವಿರೋಧ ಪಕ್ಷಗಳನ್ನೆಲ್ಲ ಒಂದೇ ರಂಗದ ಮೇಲೆ ತರುವುದು ಅತಿ ಅವಶ್ಯ. ಅದರ ಸಲುವಾಗಿಯೇ ಕಾಶ್ಮೀರ—ಕಲ್ಕತ್ತಾ ಸಮಾವೇಶಗಳು ತಳಹದಿಯನ್ನು ರೂಪಿಸಿವೆ.

ಲೋಕದಳ-ಜನತಾಪಕ್ಷ ತಮ್ಮೊಳಗೆ ಚರ್ಚೆ ನಡೆಸಿದಾಗ ಕಾಂಗ್ರೆಯನ್ನು ಸೋಲಿಸಬೇಕೆಂಬ ಜನತೆಯ ಆತುರತೆಗನುಗುಣವಾಗಿ ಒಂದು ಕನಿಷ್ಟ ಕಾರ್ಯಕ್ರಮದ ಆಧಾರದಲ್ಲಿ ಜನತಾ ಪಕ್ಷ-ಲೋಕದಳಗಳು, ಇತರ ಜಾತ್ಯಾತೀತ ಬಂಡವಾಳ ದಾರಿ ವಿರೋಧ ಪಕ್ಷಗಳ ಜೊತೆಯಲ್ಲಿ ಒಂದಾಗುವುದನ್ನು ನಮ್ಮ ಪಕ್ಷ ಸ್ವಾಗತಿಸಿತ್ತು. ವಿವಿಧ ವಿರೋಧ ಪಕ್ಷಗಳು ಒಂದಾಗಲಿಕ್ಕೂ ತೊಂದರೆಗಳಿವೆಂಬ ಅಂಶವನ್ನೂ ನಾವು ಪರಿಗಣಿಸಿದ್ದೆವು. ಆದರೂ ಕೂಡ ಸರ್ವಾಧಿಕಾರದ ವಿರುದ್ಧ ಹೋರಾಟಕ್ಕೆ ಆ ರೀತಿಯ ಬಂಡವಲದಾರಿ ವಿರೋಧ ಪಕ್ಷಗಳ ಐಕ್ಯತೆ ಹೊಸ ಸ್ಫೂರ್ತಿ ನೀಡುತ್ತದೆಂದು ಹೇಳಲು ನಾವೇನೂ ಹಿಂಜರಿಯುವುದಿಲ್ಲ. ಆ ದೃಷ್ಟಿಯಿಂದ ಮೂರೂ ಪಕ್ಷಗಳು ಸೇರಿ ದಲಿತ ಮಜದೂರ ಕಿಸಾನ ಪಕ್ಷ ಸ್ಥಾಪಿಸಿರುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಅದಷ್ಟೇ ಸಾಲದೆಂದು ಹೇಳಲು ಇಚ್ಛಿಸುತ್ತೇವೆ.

ಇತರ ಜಾತ್ಯಾತೀತ ವಿರೋಧ ಪಕ್ಷಗಳೊಡನೆ ಹೊಂದಾಣಿಕೆ—ತಿಳುವಳಿಕೆ ಮಾಡಿಕೊಳ್ಳಲು ಹೊಸ ಪಕ್ಷ ಪ್ರಯತ್ನಿಸಬೇಕು. ಸಾಮ್ರಾಜ್ಯಶಾಹಿ ಪರ, ಜಾತಿಯ ದೃಷ್ಟಿಕೋನದ ಭಾರತೀಯ ಜನತಾ ಪಕ್ಷವನ್ನು ಪ್ರತ್ಯೇಕವಾಗಿ ನೋಡಬೇಕಾಗಿದೆ. ಅಂಥದರೊಡನೆ ಯಾವುದೇ ಸಂಬಂಧ ಬೆಳೆಸಬಾರದು. ಯಾಕೆಂದರೆ ಆ ರೀತಿ ಮಾಡಿದರೆ ಜಾತ್ಯಾತೀತತೆಯನ್ನು ಬಿಟ್ಟುಕೊಟ್ಟಂತಾಗುತ್ತದೆ ಮತ್ತು ಇಂದಿರಾಗಾಂಧಿಯ ಬಲೆಯಲ್ಲಿ ಸಿಕ್ಕಿಕೊಂಡಂತಾಗುತ್ತದೆ ಹೇಗೆಂದರೆ, ಸಾಮ್ರಾಜ್ಯಶಾಹಿಗಳಿಂದ ನಮ್ಮ ದೇಶಕ್ಕೆ ಗಂಡಾಂತರವಿದೆಂಬುದನ್ನೂ, ವಿಛಿದ್ರಕಾರಿ ಶಕ್ತಿಗಳಿಂದ ಅಪಾಯವಿದೆಂಬುದನ್ನೂ ಬಿ. ಜೆ. ಪಿ. ಹಗುರವಾಗಿ ಕಾಣುತ್ತಿದೆ.

ಆ ಕಾರಣದಿಂದ ಕಾಂಗ್ರೆಯ್ಯ ಸೋಲನ್ನು ಖಚಿತಪಡಿಸುವ ಸಲುವಾಗಿ ಎಲ್ಲ ಜಾತ್ಯಾತೀತ ಬಂಡವಳಶಾಹಿ ವಿರೋಧ ಪಕ್ಷಗಳು ಒತ್ತಟ್ಟಿಗೆ ಸೇರುವುದು ಅತ್ಯಗತ್ಯ; ಅವುಗಳೆಲ್ಲ ಸೇರಿ ಒಂದೇ ಪಕ್ಷವಾಗಿ ಪರಿವರ್ತನೆಯಾಗದಿದ್ದರೂ ಕೂಡ, ತಂತಮ್ಮ ವ್ಯೆಯ್ಯಕ್ತಿಕ ದ್ವೇಷಗಳನ್ನು ಬಿಟ್ಟುಕೊಟ್ಟು ಐಕ್ಯರಂಗ ಸ್ಥಾಪಿಸಲೇ ಬೇಕು.

ಕಾಂಗ್ರೆ ಸರ್ವಾಧಿಕಾರದತ್ತ ಹೋಗುವುದರ ವಿರುದ್ಧ, ಅಂತರಿಕ ಛಿದ್ರಕಾರಿ ಶಕ್ತಿಗಳ ಹಾಗೂ ಅವರನ್ನು ಪ್ರೋತ್ಸಾಹಿಸುತ್ತಿರುವ ವಿದೇಶಿ ಸಾಮ್ರಾಜ್ಯಶಾಹಿಗಳ ವಿರುದ್ಧ, ಮತು ಜನತೆಯ ಆಶೋತ್ತರಗಳ ರಕ್ಷಣೆಯತ್ತ ಸಲುವಾಗಿ ಸತತ ಹೋರಾಡುತ್ತಿರುವ ಎಡ ಶಕ್ತಿಗಳ ಸಹಕಾರದಿಂದ ಮಾತ್ರ ಕಾಂಗ್ರೆಯನ್ನು ಸೋಲಿಸುವ ಕಾರ್ಯ ಯಶಸ್ವಿಯಾಗಲು ಸಾಧ್ಯವೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಮುಂಬರುವ ಲೋಕಸಭೆಯ ಚುನಾವಣೆಯಲ್ಲಿ ಕಾಂಗ್ರೆಯನ್ನು ಸೋಲಿಸಲು ಪ್ರಾದೇಶಿಕ ಪಕ್ಷಗಳ ಪಾತ್ರವೂ ಮಹತ್ವದಾಗಿವೆ.

ಒಂದು ವಿಷಯದಲ್ಲಿ ಎಚ್ಚರಿಕೆ ಅವಶ್ಯ. ಚುನಾವಣೆಯ ಪ್ರಚಾರ ನಡೆಸುವಾಗ, ದೇಶದ ಸಮಗ್ರತೆಗೆ ಛಿದ್ರಕಾರಿ ಶಕ್ತಿಗಳಿಂದಲೂ, ನೆರೆಕರೆಯಲ್ಲಿರುವ ನಮ್ಮ ವಿರೋಧಿ ದೇಶಗಳಿಂದಲೂ ಮುಖ್ಯವಾಗಿ ಪಾಕಿಸ್ತಾನದ ಸರ್ವಾಧಿಕಾರಿ ಆಡಳಿತೆಯಿಂದಲೂ, ಅಮೇರಿಕದ ಸಾಮ್ರಾಜ್ಯಶಾಹಿಗಳ ಅಣ್ವಸ್ತ್ರ ಧಾಳಿಯಿಂದಲೂ ಅಪಾಯವಿದೆಂಬುದನ್ನು ಬಿಟ್ಟು ಕೊಟ್ಟದ್ದಾದರೆ ದೇಶದ ಸಾರ್ವಭೌಮತ್ವ ಮತ್ತು ರಕ್ಷಣೆಯನ್ನು ಅಪೇಕ್ಷಿಸುವ ಜನರಿಂದ ಅವರು ದೂರೀಕರಿಸಲ್ಪಡುತ್ತಾರೆ. ಮಾತ್ರವಲ್ಲ ಆಳುವ ಪಕ್ಷ ಈ ವಿಷಯದಲ್ಲಿ ಲಾಭ ಪಡೆಯಲು ಅವಕಾಶ ಮಾಡಿ ಕೊಟ್ಟಂತಾಗುತ್ತದೆಂಬುದನ್ನು ನೆನಪಿಟ್ಟು ಕೊಳ್ಳಬೇಕು.

ತೋಟ ಕಾರ್ಮಿಕರ ಮುಷ್ಕರ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿರುವ ಚಂದ್ರಾಪುರ ಕಾಫಿ ತೋಟದ ಕಾರ್ಮಿಕರಿಗೆ ತೋಟದ ಮಾಲೀಕರು ಪ್ಲಾಂಟೇಷನ್ ಲೇಬರ್ ಆಕ್ಟ್ ಮತ್ತು ರೂಲ್ಸ್‌ನಲ್ಲಿರುವ ಅನೇಕ ಸೌಲತ್ತುಗಳನ್ನು ಕೊಡದಿರುವುದನ್ನು ಮತ್ತು ಕಳೆದ 6 ತಿಂಗಳುಗಳಿಂದ ತೋಟದಲ್ಲಿ ಕೆಲಸ ಮಾಡಿಕೊಂಡಿದ್ದ 22 ಕಾರ್ಮಿಕರನ್ನು ಯಾವ ಮುನ್ಸೂಚನೆಯನ್ನೂ ಕೊಡದೆ ಕೆಲಸ ನಿರಾಕರಿಸಿದ್ದನ್ನು ಪ್ರತಿಭಟಿಸಿ ದಿನಾಂಕ 28-9-1984 ರಿಂದ 30-9-1984 ರ ವರೆಗೆ ಸುಮಾರು 200 ಕಾರ್ಮಿಕರು ಮುಷ್ಕರ ನಡೆಸಿದರು.

ತದನಂತರ ಚಿಕ್ಕಮಗಳೂರಿನ ಕಾರ್ಮಿಕ ಅಧಿಕಾರಿಗಳ, ಕಾರ್ಮಿಕ ಮಾಲೀಕರ ಪ್ರತಿನಿಧಿಗಳ ಸಂಧಾನ ಸಭೆಗಳನ್ನು ನಡೆಸಿ ಈ ಕೆಳಕಂಡ ಒಪ್ಪಂದಕ್ಕೆ ಬರಲಾಯಿತು. ಒಪ್ಪಂದದ ಪ್ರಕಾರ ದಿನಾಂಕ 18-10-1984 ರಿಂದ ದಿನಾಂಕ 31-3-1985 ರ ವರೆಗೆ ಕೆಲಸ ನಿರಾಕರಿಸಲ್ಪಟ್ಟ 22 ಕಾರ್ಮಿಕರ ಪೈಕಿ 17 ಕಾರ್ಮಿಕರಿಗೆ ಉಮೆದ್ವಾರಿ (ಪ್ರೊಬೇಶನರಿ) ಯಾಗಿ ಕೆಲಸ ಕೊಡುವುದಾಗಿಯೂ ದಿನಾಂಕ 1-4-85 ರಿಂದ ಎಲ್ಲಾ 17 ಕಾರ್ಮಿಕರನ್ನೂ ಕಾಯಂ ಗೊಳಿಸುವುದಾಗಿಯೂ ಉಳಿದ 5 ಕಾರ್ಮಿಕರಿಗೆ ತಲಾ ಒಂದಕ್ಕೆ ರೂ. 175=60 ಪೈಸೆಯಂತೆ ಪರಿಹಾರ ಕೊಡಬೇಕೆಂದೂ ತೀರ್ಮಾನವಾಗಿರುತ್ತದೆ. ಮೇಲ್ಕಂಡ ಒಪ್ಪಂದಕ್ಕೆ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನಿನ ಪಧಾದಿಕಾರಿಗಳಾದ ಎ. ಕೆ. ವಿಶ್ವನಾಥ್ ಮತ್ತು ಜಿ. ಎಸ್. ರಾಘವೇಂದ್ರರವರುಗಳು ಸಹಿ ಹಾಕಿರುತ್ತಾರೆ. ಬೋನಸ್ಸ್, ಹೆರಿಗೆ ಭತ್ಯ, 3 ರಿಂದ 5 ವರ್ಷಗಳವರೆಗೆ ಕೆಲಸ ಮಾಡಿಕೊಂಡಿದ್ದ ಕಾರ್ಮಿಕರನ್ನು ಕಾಯಂಗೊಳಿಸುವ ವಿಚಾರವಾಗಿ ದಿನಾಂಕ 6-11-84 ರಂದು ಸೌಹಾರ್ದ ರೀತಿಯಿಂದ ಕಾರ್ಮಿಕ ಅಧಿಕಾರಿಗಳ ಸಮ್ಮುಖದಲ್ಲಿ ಸಂಧಾನ ನಡೆಸಿ ಇತ್ಯರ್ಥ ಮಾಡುವ ಭರವಸೆಯನ್ನು ತೋಟ ಮಾಲೀಕರು ಕೊಟ್ಟಿರುತ್ತಾರೆ.

ಚಂದ್ರಾಪುರ ಕಾಫಿ ತೋಟದ ಕಾರ್ಮಿಕರು ಒಗ್ಗಟ್ಟಿನಿಂದ ನಡೆಸಿದ ಹೊರಾಟದಿಂದ ಕಾರ್ಮಿಕರಿಗೆ ದೊರೆತ ಪ್ರಥಮ ವಿಜಯವೇ 17 ಕಾರ್ಮಿಕರಿಗೆ ಕೆಲಸ ಸಿಕ್ಕಿರುವುದಾಗಿರುತ್ತದೆ. ಉಳಿದಿರುವ ವಿಷಯಗಳ ಬಗ್ಗೆಯೂ ತೋಟದ ಮಾಲೀಕರು ಕಾರ್ಮಿಕರಿಗೆ ತೃಪ್ತಿಕರವಾದ ಒಪ್ಪಂದಕ್ಕೆ ಬಾರದಿದ್ದಲ್ಲಿ ಪುನಃ ಕಾರ್ಮಿಕರು ಹೋರಾಟಕ್ಕೆ ಸಿದ್ಧರಾಗಿರುವರು.

ಸಾರ್ವಜನಿಕ ಸಭೆ

ತಾ|| 14-10-84 ರಂದು ಆದಿತ್ಯವಾರ ಪಡೀಲ್ ಬಸ್‌ಸ್ಟಾಂಡಿನ ಬಳಿ ಸಂಜೆ 5 ಗಂಟೆಗೆ ಸಾರ್ವಜನಿಕ ಸಭೆ ಜರುಗಿತು.

ಸಭೆಯನ್ನುದ್ದೇಶಿಸಿ ದ. ಕ. ಬೀಡಿ ವರ್ಕರ್ಸ್ ಫೆಡರೇಶನ್ನಿನ ಕಾರ್ಯದರ್ಶಿ ಕಾ| ಯು. ಬಿ. ಲೋಕಯ್ಯ ಹಾಗೂ ಕಾ|| ಪಿ. ರಾಮಚಂದ್ರರಾವ್ ಎಂ. ಎಲ್.ಎ. ಇವರು ತಾ|| 18-10-84 ರ ಬೀಡಿ ಕಾರ್ಮಿಕರ ಸತ್ಯಾಗ್ರಹದ ಬಗ್ಗೆ ಮತ್ತು ಇಂದಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ವಿವರಿಸಿದರು.

ಕೇರಳದಲ್ಲಿ ವಿದ್ಯಾರ್ಥಿ ಮುಖಂಡರ ಭೀಕರ ಕೊಲೆ

ಇಂದಿರಾ ಕಾಂಗ್ರೆಸ್ಸಿನ ವಿದ್ಯಾರ್ಥಿ ಸಂಘಟನೆಯಾದ ರಾಷ್ಟ್ರೀಯ ವಿದ್ಯಾರ್ಥಿ ಸಂಘಟನೆ ನಾಗಪುರದಲ್ಲಿ ತಮ್ಮ ಸಮಾವೇಶ ನಡೆದಾಗ ಮಹಿಳೆಯರ ಮಾನಭಂಗ, ಅಂಗಡಿಗಳ ಲೂಟಿಗಳನ್ನು ನಡೆಸುತ್ತಿರುವಾಗ ಕೇರಳದಲ್ಲಿರುವ ಇವರ ಬಂಧುಗಳು ವಿದ್ಯಾರ್ಥಿ ಫೆಡರೇಶನಿನ [ಎಸ್. ಎಫ್. ಐ.] ಮುಖಂಡರ ಕೊಲೆ ಮಾಡುವುದರಲ್ಲಿ ಮಗ್ನರಾಗಿದ್ದಾರೆ.

ದಕ್ಷಿಣ ಕೇರಳದ ಪಧ್ಯನಂತಿದ್ಧ ಗ್ರಾಮದಲ್ಲಿ ಜಿಲ್ಲಾ ವಿದ್ಯಾರ್ಥಿ ಫೆಡರೇಶನಿನ ಉಪಾಧ್ಯಕ್ಷರಾದ ಎಂ-ಎಸ್. ಪ್ರಸಾದ ಅವರು ಡಿ.ವೈ.ಎಫ್.ಐ.ಯ ಪ್ರಸನ್ನರ ಜೊತೆ ಮಾತಾಡುತ್ತಿದ್ದಾಗ, ಮಾರಕಾಸ್ತ್ರಗಳಿಂದ ಆವರ ಮೇಲೆ ಆಕ್ರಮಣ ಮಾಡಿ ಪ್ರಸಾದ ಅವರನ್ನು ಕೊಲೆ ಮಾಡಿರುವುದನ್ನು ನೋಡುವಾಗ ಕಾಂಗ್ರೆಯ ಹಿಂಸೆ ಎಷ್ಟು ತೀವ್ರ ರೂಪ ತಾಳಿವೆಯೆಂದು ತಿಳಿದು ಬರುತ್ತದೆ. ಎಂ.ಎಸ್. ಪ್ರಸಾದ ಅವರಿಗೆ ಚಾಕು-ಚೂರಿಯಿಂದ 17 ಸಲ ತಿವಿದು ಕಾಂಗ್ರೆಯ ಜಿಲ್ಲಾ ಕಾರ್ಯದರ್ಶಿ ಕೆ. ಇ. ವರ್ಗೀಸರ ಮನೆ ಹೊಕ್ಕರೆಂದು ತಿಳಿದುಬರುತ್ತದೆ. ಆಗಸ್ಟ 25 ರಂದು ಬಂದ್ ಆಚರಿಸುವಾಗಲೂ ಪ್ರಸಾದನ ಮೇಲೆ ಆಕ್ರಮಣ ಮಾಡಲಾಗಿತ್ತು. ಇದೇ ಗುಂಡಾ ಜನರು 1982 ಡಿಸೆಂಬರ್ 12 ರಂದು ಸಿ. ವಿ. ಜೋಸೆಫ್ ಎಂಬ ವಿಧ್ಯಾರ್ಥಿ ಫೆಡರೇಶನಿನ ಮುಖಂಡನನ್ನು ಕೊಲೆ ಮಾಡಿದ್ದರು. ಕೇರಳದ ಕರುಣಾಕರನ್ ಸರಕಾರ ಬೆಳೆದು ಬರುತ್ತಿರುವ ಎಸ್. ಎಫ್. ಐ. ಯನ್ನು ಮುರಿಯಲು ಈ ತರದ ರಾಕ್ಷಸೀ ದಬ್ಬಾಳಿಕೆ ನಡೆಸಿದೆ. ರಾಜ್ಯ ಎಸ್.ಎಫ್.ಐ. ಯುವಜನ ಸಂಘಟನೆ ಮತ್ತು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಈ ಕೊಲೆಯನ್ನ ಖಂಡಿಸುತ್ತದೆ.

ಆರ್ಥಿಕ ಸಮೀಕ್ಷೆ :

ಉತ್ಪಾದನೆ ಮತ್ತು ಹಣದುಬ್ಬರ

ಆರ್. ಚಂದ್ರ

ಲೋಕಸಭಾ ಚುನಾವಣೆಯು ಸಮೀಪಿಸುತ್ತಿದ್ದಂತೆ, ಇಂದಿರಾ ಕಾಂಗ್ರೆಸ್ ಪುನಃ ಅಧಿಕಾರಕ್ಕೆ ಬರಲು ತನ್ನ ಸರಕಾರದ ಸಾಧನೆಗಳನ್ನು ಮುಂದೊಡ್ಡುವ ಎಲ್ಲಾ ಪ್ರಚಾರ ತಂತ್ರಗಳನ್ನು ಚುರುಕುಗೊಳಿಸುತ್ತಿದೆ. ಕೃಷಿ ಮತ್ತು ಕೈಗಾರಿಕಾ ಉತ್ಪಾದನೆಗಳು ಹೆಚ್ಚುತ್ತಿದ್ದು, ಹಣ ದುಬ್ಬರ ಇಳಿಮುಖವಾಗುತ್ತಿದೆ ಎಂದು ಇತ್ತೀಚೆಗೆ ಭಾರೀ ಪ್ರಚಾರ ನಡೆಯುತ್ತಿದೆ. ಆದರೆ ಸತ್ಯಾಂಶವೇನು? ಉತ್ಪಾದನೆ ಹೆಚ್ಚಾಗಿದೆಯೇ? ಹೆಚ್ಚಾದ ಉತ್ಪಾದನೆಗನುಗುಣವಾಗಿ ಹಣ ದುಬ್ಬರ ಇಳಿಮುಖವಾಗುತ್ತಿದೆಯೇ?

ಕೃಷಿ ಉತ್ಪಾದನೆ: 1983—84ನೇ ವರ್ಷದಲ್ಲಿ ಆಹಾರ ಧಾನ್ಯಗಳ ಒಟ್ಟು ಉತ್ಪಾದನೆಯು 151.5 ಮಿಲಿಯ ಟನ್‌ಗಳಷ್ಟಾಗಿದ್ದು, ಹಿಂದಿನ ಎಲ್ಲಾ ವರ್ಷಗಳ ದಾಖಲೆಗಳನ್ನು ಮೀರಿದೆ ಎಂದು ಸರಕಾರದ ವಿವಿಧ ವಲಯಗಳಿಂದ ಪ್ರಚಾರವಾಗುತ್ತಿದೆ. ಆದರೆ ಈ ವರ್ಷದ ಆಹಾರಧಾನ್ಯಗಳ ಉತ್ಪಾದನೆಯ ಅಂದಾಜು ಹಲವು ಬಾರಿ ಬದಲಾವಣೆ ಆದುದನ್ನು ಗಮನಿಸಬೇಕು; ಮೊದಲು 144 ಮಿ. ಟನ್‌ಗಳೆಂದು ಅಂದಾಜು ಮಾಡಲಾಗಿದ್ದು, ನಂತರ 150 ಮಿ. ಟನ್‌ಗಳಿಂದ 156 ಮಿ. ಟನ್‌ಗಳ ವರೆಗೂ ಪರಿಷ್ಕರಿಸಲಾಯಿತು. ಅದೇನೇ ಇರಲಿ, ಕಳೆದ ವರ್ಷಕ್ಕಿಂತ ಈ ವರ್ಷದ ಕೃಷಿ ಉತ್ಪಾದನೆ ಹೆಚ್ಚಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಹಿಂದಿನ ಐದು ವರ್ಷಗಳ ಸರಾಸರಿ ಉತ್ಪಾದನೆಯು 130.55 ಮಿ. ಟನ್‌ಗಳಷ್ಟೇ ಆಗಿದ್ದು, 1978–79ರ ಉತ್ಪಾದನಾ ಮಟ್ಟ 131.9 ಮಿ.ಟನ್‌ಗಳಿಗಿಂತಲೂ ಕಡಿಮೆಯಾಗಿರುವುದನ್ನು ಗಮನಿಸಬೇಕು. [1979–80 : 109.70 ಮಿ. ಟ., 1980–81 : 129.87 ಮಿ. ಟನ್., 1981–82 : 133.30 ಮಿ. ಟ., 1982–83: 128.40 ಮಿ.ಟ.,]. 1984–85ರಲ್ಲಿ ಪುನಃ ಬರಗಾಲ ಪರಿಸ್ಥಿತಿ ಅನೇಕ ರಾಜ್ಯಗಳಲ್ಲಿ ತಲೆ ದೋರಿರುವುದರಿಂದ ಹಿಂದಿನ ವರ್ಷದ ಹೊಸ ದಾಖಲೆಯನ್ನು ಪುನಃ ಮುಟ್ಟುವ ಸಾಧ್ಯತೆ ಇಲ್ಲವಾದೀತು.

ಡಾ|| ಎ. ಶಂಕರ ಅವರ ಒಂದು ಸಮೀಕ್ಷೆಯಂತೆ [ಹಿಂದು : 16–10–84] ಕಳೆದ ಮೂರು ದಶಕಗಳ ಕಾಲದಲ್ಲಿ ವ್ಯವಸಾಯಕ್ಕೆ ಒದಗಿಸಿದ ಹೆಚ್ಚುವರಿ ಭೂಮಿ, ನೀರಾವರಿ, ಗೊಬ್ಬರ, ಉತ್ತಮ ತಳಿ ಬೀಜ, ಯಂತ್ರ– ತಂತ್ರ, ಸಾಲ–ಸಹಾಯಗಳನ್ನು ಗಣನೆಗೆ ತೆಗೆದು ಕೊಂಡರೆ, ಇಂದು ಭಾರತದ ಕೃಷಿ ಉತ್ಪಾದನೆ ಗರಿಷ್ಠ 271 ಮಿ. ಟನ್ ಅಥವಾ ಕನಿಷ್ಠ 173 ಮಿ. ಟನ್‌ಗಳಷ್ಟಾದರೂ ಆಗಬೇಕಿತ್ತು. ಆದರೆ, 7ನೇ ಪಂಚ ವಾರ್ಷಿಕ ಯೋಜನೆಯ [1985–19೯0] ಅಂತ್ಯದಲ್ಲಿಯೂ ಆಹಾರ ಧಾನ್ಯಗಳ ಉತ್ಪಾದನೆಯ ಗುರಿ 170 ರಿಂದ 1೮0 ಮಿ. ಟನ್‌ಗಳಷ್ಟೇ ಆಗಿರುವುದು. ಸದ್ಯದ 151ಮಿ ಟನ್ ಆಹಾರಧಾನ್ಯಗಳು ಉತ್ಪದನೆಹಿಂದ ದೇಶದ 700 ಮಿಲಿಯಕ್ಕೂ ಹೆಚ್ಚು ಜನರ ಹಸಿವು ಬಡತನಗಳನ್ನು ಹೋಗಲಾಡಿಸಲಾಗದು. ಸಮಾಜವಾದಿ ಚೀನಾ ಗಣ್ಯರಾಜ್ಯದಲ್ಲಿ 1000, ಮಿಲಿಯ ಜನಸಂಖೆಗೆಈಗ 387 ಮಿಟನ್ ಆಹಾರ ಧಾನ್ಯಗಳನ್ನು ಉತ್ಪದಿಸಲಾಗುತ್ತದೆ. ಈ ಪ್ರಮಾಣದಲ್ಲಿ ಭಾರತದ 700 ಮಿಲಿಯ ಜನಸಂಖ್ಯೆಗೆ 270 ಮಿ ಟನ್ ಆಹಾರ ಧಾನ್ಯಗಳು ಉತ್ಪದನೆಆಗ ಬೇಕಿತ್ತು.ಆಹಾರಧಾನ್ಯಗಳ ಉತ್ಪದನೆಯಲ್ಲಿ ಚೀನಾದ ಅರ್ಧದಷ್ಟೂ ಸಾಧನೆ ಭಾರತದಲ್ಲಿ ಆಗಲಿಲ್ಲ ಚೀನದಲ್ಲಿ ವ್ಯವಸಾಯ ಭೂ ಹಿಡುವಳಿ ಸರಾಸರಿ ವಿಸ್ತೀರ್ಣ1.30 ಹೆಕ್ಟೇರ್‌ಆಗಿದ್ದರೆ. ಭಾರತದಲ್ಲಿ 2 ಹೆಕ್ಟೇರ್ ಆದರೆ. ಚೀನಾದಲ್ಲಿ ಹೆಕ್ಟೇರ್ ಒಂದಕ್ಕೆ ಸರಾಸರಿ ಉತ್ಪದನೆ 5-6 ಟನ್‌ಗಳಷ್ಟಾಗಿದ್ದರೆ. ಭಾರತದಲ್ಲಿ 2 ಟನ್‌ಗಳಷ್ಟೇ! (ಅಂತರಾಷ್ಟ್ರಿಯ ಅಕ್ಕಿ ಸಂಶೊಧನಾ ಕೇಂದ್ರ. ಮನಿಲಾ ಭಾರತದ ತಜ್ಞ ಡಾ ಗುರುದೇವ ಸಿಂಘಖುಷ್ ಮತ್ತು ಚೀನಾದ ತಜ್ಞ ಡಾ|| ಟಿ. ಟಿ. ಚಾಂಗ್ ಇವರ ಇತ್ತೀಚೆಗಿನ ಸಮೀಕ್ಷೆ)

ಭಾರತದ ಕೃಷಿ ಉತ್ಪಾದನೆ 35 ವರ್ಷಗಳಿಂದಲೂ ಕುಂಟುತ್ತಲೇ ಇದೆ. 1960–61 ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯು 82 ಮಿ. ಟನ್‌ಗಳಷ್ಟಾಗಿದ್ದರೆ. 25 ವರ್ಷಗಳಲ್ಲಿ ದ್ವಿಗುಣವೂ ಆಗದೆ 150 ಮಿ. ಟನ್‌ಗಳ ಮಟ್ಟದಲ್ಲಿಯೇ ಸ್ಥಗಿತ ಗೊಂಡಿದೆ. ಕಾರಣ? ಸಮಾಜವಾದಿ ಚೀನಾ ಗಣರಾಜ್ಯದಂತೆ ಭಾರತದಲ್ಲಿ 'ಉಳುವವನೇ ಹೊಲದೊಡೆಯ' ನಾಗುವ ಸಾಮಾಜಿಕ ಕ್ರಾಂತಿ ಇನ್ನೂ ಆಗಲಿಲ್ಲ. ವ್ಯವಸಾಯ ಭೂಮಿಯ ಒಡೆತನದ ಸಿಂಹಪಾಲು ಇನ್ನೂ ಅಲ್ಪ ಸಂಖ್ಯಾತ ಭೂಮಾಲಿಕರ ಹಾಗೂ ಶ್ರೀಮಂತ ರೈತರ ಕಪಿ ಮುಷ್ಠಿಯಲ್ಲಿದೆ. ಬಹುಸಂಖ್ಯಾತ ಭೂಹೀನ ಕೃಷಿ ಕಾರ್ಮಿಕರೂ, ಚಿಕ್ಕ ಹಿಡುವಳಿಯ ಬಡ ಹಾಗೂ ಮಧ್ಯಮ ರೈತರೂ ಲಾಭದಾಯಕವಾಗಿ ವ್ಯವಸಾಯ ಮಾಡಲು ಅಸಮರ್ಥರಾಗಿದ್ದಾರೆ. ಅವರು ಅನಕ್ಷರತೆ, ನಿರುದ್ಯೋಗ, ಬಡತನ, ಸಾಲಗಳಿಂದ ನರಳುತ್ತಿದ್ದಾರೆ. ಅವರ ಉತ್ಪಾದನಾ ಸಾಮರ್ಥ್ಯ ವ್ಯರ್ಥವಾಗುತ್ತಿದೆ. ಪಾಳೆಯಗಾರಿ ಹಾಗೂ ಬಂಡವಾಳಶಾಹಿ ಪದ್ಧತಿಯ ವ್ಯವಸಾಯದಿಂದ ನಿರೀಕ್ಷಿಸಿದ ಕೃಷಿ ಉತ್ಪಾದನೆಯನ್ನು ಸಾಧಿಸಲಸಾಧ್ಯವೆಂದು ನಮ್ಮ ಇದುವರೆಗಿನ ಅನುಭವದಿಂದ ತಿಳಿಯುವುದು. ಧೀರ್ಘ ಕಾಲದ ಕಾಂಗ್ರೆಸ್ ಆಡಳಿತ ಈ ಮೂಲಭೂತ ಸಮಸ್ಯೆಗೆ ಪರಿಹಾರ ನೀಡಲು ಅಸಮರ್ಥವಾಗಿದೆ. ಈಗ ಬರೀ ತೇಪೆ ಹಚ್ಚುವ ಕೆಲಸ ಮಾಡುತ್ತಿದೆ!

ಕೈಗಾರಿಕಾ ಉತ್ಪಾದನೆ

1984–85 ರ ಮೊದಲ ಮೂರು ತಿಂಗಳಲ್ಲಿ ಕೈಗಾರಿಕಾ ಉತ್ಪಾದನೆಯು ಶೇ 7.5 ರ ದರದಲ್ಲಿ ಹೆಚ್ಚಾಗಿದೆ ಎಂದೂ, ವರ್ಷಾಂತ್ಯದಲ್ಲಿ ಶೇ 10 ರ ದರದಲ್ಲಿ ಕೈಗಾರಿಕ ಉತ್ಪಾದನೆಯಲ್ಲಿ ಹೆಚ್ಚಳ ಸಾಧಿಸಬಹುದೆಂದೂ; ಆರನೇ ಯೋಜನೆಯಲ್ಲಿ (1980–85) ಶೇ 6.2 ರ ದರದಲ್ಲಿ ಕೈಗಾರಿಕಾ ಉತ್ಪಾನೆಯಲ್ಲಿ ಹೆಚ್ಚಳವಾಗುವುದೆಂದೂ ಪ್ರಚಾರ ಮಾಡಲಾಗುತ್ತಿದೆ. ಆದರೆ, ಇತ್ತೀಚೆಗಿನ ಒಂದು ಸಮೀಕ್ಷೆಯಂತೆ (ಇಂಡಿಯಾ ಟುಡೇ : 30–9–84) 1982-83 ಮತ್ತು 1983-84 ರಲ್ಲಿ ಕೈಗಾರಿಕಾ ಉತ್ಪಾದನೆಯ ದರವು ಅನುಕ್ರಮವಾಗಿ ಶೇ 3.9 ಮತ್ತು ಶೇ. 4.26 ಅಷ್ಟೇ ಆಗಿತ್ತು. 1979-೮0 ರ ಶೇ 1.4 ರಷ್ಟು ಇಳಿಮುಖದ ಕೈಗಾರಿಕಾ ಉತ್ಪಾದನೆಯನ್ನು ಗಣನೆಗೆ ತೆಗೆದುಕೊಂಡರೆ ಕಳೆದ ಆರು ವರ್ಷಗಳಲ್ಲಿ ಕೈಗಾರಿಕಾ ಉತ್ಪಾದನೆಯ ಹೆಚ್ಚಳವು ಶೇ 5 ರ ದರದಲ್ಲಿಯೇ ಇದೆ. ಈ ದರವು ಐದನೇ ಯೋಜನೆಯ ದರದಷ್ಟು ಆಗಿದ್ದು. ಹೆಚ್ಚಾಗಲಿಲ್ಲ. ರಿಸರ್ವ್ ಬ್ಯಾಂಕಿನ 1983–84 ರ ವಾರ್ಷಿಕ ವರದಿಯಂತೆ [ಸಂಡೇ ಅಬ್ಸ್‌ರವರ್ : 21.10.84] 1983-84 ರಲ್ಲಿ ಕೈಗಾರಿಕಾ ಉತ್ಪಾದನೆಯ ಅಭಿವೃದ್ಧಿ ದರವು ಶೇ. 5.4 ರಷ್ಟೇ ಆಗಿದ್ದು ಯೋಜನೆಯ ಗುರಿ ಶೇ ೮–10 ಕ್ಕಿಂತ ಬಹಳ ಹಿಂದೆ ಉಳಿದಿದೆ. ಆದರೆ ಬಂಡವಾಳ ಹೂಡುವಿಕೆಯು ಶೇ 23.3 ರಷ್ಟು ಹೆಚ್ಚಾಗಿದೆ. ಅದಕ್ಕನುಗುಣವಾಗಿ ಉತ್ಪಾದನೆ ಹೆಚ್ಚಗಲಿಲ್ಲ.

ಕೈಗಾರಿಕಾ ಉತ್ಪಾದನೆಯಲ್ಲಿಯೂ ಭಾರತದ ಸಾಧನೆಯನ್ನು ಚೀನಾಕ್ಕೆ ಹೋಲಿಸಿದರೆ ಭಾರತ ಎಷ್ಟು ಹಿಂದುಳಿದಿದೆ ಎಂದು ಸ್ಪಷ್ಟವಾಗುವುದು. ಚೀನಾದಲ್ಲಿಯೂ ಈ ವರ್ಷ ಆರನೇ ಪಂಚ ವಾರ್ಷಿಕ ಯೋಜನೆ ಮುಗಿದು ಏಳನೇ ಯೋಜನೆಯು ಪ್ರಾರಂಭವಾಗಲ್ಲಿದೆ. 1983 ರಲ್ಲಿ ಚೀನಾ ಮತ್ತು ಭಾಗತದ ಕೆಲವು ಪ್ರಮುಖ ಕೈಗಾರಿಕಾ ಉತ್ಪಾದನೆಯನ್ನು ಹೋಲಿಸೋಣ.

	ಭಾರತ	ಚೀನ
ಉಕ್ಕು	7.5 ಮಿ.ಟ.	39 ಮಿ.ಟ.
ಕಲ್ಲಿದ್ದಲು	145.0 ಮಿ.ಟ.	700 ಮಿ.ಟ.
ತೈಲ	25.0 ಮಿ.ಟ.	110 ಮಿ.ಟ.

ಕೈಗಾರಿಕಾ ಉತ್ಪಾದನೆಯಲ್ಲಿಯೂ ಚೀನಾ ಮೇಲ್ಗೈ ಸಾಧಿಸಿದೆ. ಕಾರಣ? ಸಮಾಜವಾದಿ ಚೀನಾದಲ್ಲಿ ಬೃಹತ್ ಕೈಗಾರಿಕೆಗಳು ಸಾರ್ವಜನಿಕ ಕ್ಷೇತ್ರದಲ್ಲಿವೆ. ಇತರ ಕೈಗಾರಿಕೆಗಳು ಸಾರ್ವಜನಿಕ ಸಹಕಾರಿ ಕ್ಷೇತ್ರಗಳಲ್ಲಿಯೂ ಸ್ವಲ್ಪಾಂಶ ಮಾತ್ರ ಖಾಸಗೀ ಕ್ಷೇತ್ರದಲ್ಲಿಯೂ ಇವೆ. ಆರ್ಥಿಕ ಅಭಿವೃದ್ಧಿಯಲ್ಲಿ ಚೀನಾ ಸ್ವಾವಲಂಬಿಯಾಗಿದೆ. ಆದರೆ. ಭಾರತದಲ್ಲಿ ಕೈಗಾರಿಕಾ ಉತ್ಪಾದನೆಯ ಬಹುಪಾಲು ಗುತ್ತೇದಾರಿ ಬಂಡವಾಳ ಶಾಹಿಗಳ ಸ್ವಾಮ್ಯದಲ್ಲಿದೆ. ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳು ಹೆಚ್ಚಾಗಿ ಇವುಗಳಿಗೇ ಪೂರಕವಾಗಿವೆ. ಕೆಲವೊಮ್ಮೆ ಸಾರ್ವಜನಿಕ ಕ್ಷೇತ್ರದ ನಷ್ಟ ಖಾಸಗೀಕ್ಷೇತ್ರದ ಲಾಭವಾಗಿ ಪರಿಣಮಿಸುತ್ತದೆ. ಭಾರತದಲ್ಲಿ ಆರ್ಥಿಕ ಅಭಿವೃದ್ಧಿಗೆ ಭಾರೀ ಪ್ರಮಾಣದಲ್ಲಿ ವಿದೇಶಿ ನೆರವು ಪಡೆಯಲಾಗುತ್ತಿದೆ. ಹೀಗಾಗಿ ಸ್ವಾವಲಂಬನೆಯ ಗುರಿ ದೂರವಾಗುತ್ತಿದೆ, ಸಾಲದ ಹೊರೆ ಹೆಚ್ಚುತ್ತಿದೆ.

ಕೈಗಾರಿಕಾಭಿವೃದ್ಧಿಯಲ್ಲಿ ಸ್ಥಗಿತ ಸ್ಥಿತಿಯನ್ನು ಮತ್ತು ಸಾರ್ವಜನಿಕ ಕ್ಷೇತ್ರದ ನಷ್ಟದ ಪರಿಸ್ಥಿತಿಯನ್ನು ಹೋಗಲಾಡಿಸಲು ವಿದೇಶಿ ನೆರವಿಗೆ ಮತ್ತು ಖಾಸಗೀ ಕ್ಷೇತ್ರದ ಏಕಸ್ವಾಮ್ಯ ಸಂಸ್ಥೆಗಳಿಗೆ ಇನ್ನಷ್ಟೂ ಅವಕಾಶಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕಾಗಿ ಒತ್ತಾಯಿಸಲಾಗುತ್ತಿದೆ. ಆದರೆ, ಇದುವರೆಗಿನ ಅನುಭವದಂತೆ, ಬಂಡವಾಳ ಹೂಡುವಿಕೆಗನುಗುಣವಾಗಿ ಉತ್ಪಾದನೆ, ಉದ್ಯೋಗ ಹೆಚ್ಚುತ್ತಿಲ್ಲ ನಷ್ಟ ಸಂಭವಿಸುತ್ತಿರುವುದು ಸಾರ್ವಜನಿಕ ಕ್ಷೇತ್ರದಲ್ಲಿ ಮಾತ್ರವಲ್ಲ, ಖಾಸಗೀ ಕ್ಷೇತ್ರದಲ್ಲಿಯೂ ಸಾವಿರಾರು ಕೈಗಾರಿಕಾ ಸಂಸ್ಥೆಗಳು ನಷ್ಟದ ದಾರಿಯಲ್ಲಿವೆ. ನಷ್ಟದ ಮುಖ್ಯ ಕಾರಣ ಮಾರುಕಟ್ಟೆಯ ಅಭಾವ ದೇಶದೊಳಗೆ ಬಡತನ, ನಿರುದ್ಯೋಗ ಹಣ ದುಬ್ಬರದಿಂದ ಜನಕೋಟಿಯ ಗ್ರಾಹಕ ಶಕ್ತಿಯು ಕ್ಷಯಿಸುತ್ತಿದೆ. ವಿದೇಶಗಳಲ್ಲಿ ತೀವ್ರ ಪೈಪೋಟಿಯನ್ನೂ ಭಾರೀ ಪ್ರಮಾಣದ ತೆರಿಗೆಗಳನ್ನೂ ಎದುರಿಸ ಬೇಕಾಗುತ್ತದೆ. ಕಾಂಗ್ರೆಸ್‌ನ ಧೀರ್ಘಕಾಲದ ಆಳ್ವಿಕೆ ಈ ಮೂಲ ಭೂತ ಸಮಸ್ಯೆಗೆ ಪರಿಹಾರ ನೀಡಲಾರದು. ಇಲ್ಲಿಯೂ ಆಗುತ್ತಿರುವುದು ಕೇವಲ ತೇಪೆಹಚ್ಚುವ ಕೆಲಸ!

[6ನೇ ಪುಟ ನೋಡಿ]

ಓ.... ಬನ್ನಿ ಸೋದರರೇ ಬೇಗ ಬನ್ನಿ !

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರ ಬನ್ನಿ
ಬಡತನವ ಬುಡ ಮಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ
ಓ.... ಬನ್ನಿ, ಸೋದರರೆ ಬೇಗ ಬನ್ನಿ ।

ಅದೋ, ನೋಡಿ ರಷ್ಯಾ, ಜಪಾನು ತುರ್ಕಿಗಳೆಲ್ಲಾ
ಪರೆಗಳಚಿ ಹೊರಟಿಹವು ಹೊಸ ಪಯಣಕೆ!
ಬೆಳಗಿಹವು ನೆತ್ತರೆಣ್ಣೆಯ ತಿಳಿವಿನುರಿಯಲ್ಲಿ
ಕಿಚ್ಚಿಟ್ಟು ಹಳೆಕೊಳಕು ಬಣಗು ತೃಣಕೆ
ಓ.... ಬನ್ನಿ ಸೋದರರೆ, ರಾಷ್ಟ್ರ ರಣಕೆ ।

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕ ಹಿತಕೆ
ಆ ಮತದ ಈ ಮತದ ಹಳೆ ಮತದ ಸಹವಾಸ
ಸಾಕಿನ್ನು ಸೇರಿರೈ ಮನುಜ ಮತಕೆ
ಓ.... ಬನ್ನಿ ಸೋದರರೆ ವಿಶ್ವ ಪಥಕೆ ।

— ಕುವೆಂಪು

[1935 ರಲ್ಲಿ ಬರೆದದ್ದು]

ಕಾಂಗ್ರೆಸ್ ಸಮಾಜವಾದಿಗಳು ಮತ್ತು ಕಮ್ಯುನಿಸ್ಟರು

1984 ನ್ನು "ಭಾರತ ಸಮಾಜವಾದೀ ಆಂದೋಲನದ ಸುವರ್ಣ ಮಹೋತ್ಸವ ವರ್ಷ" ಎಂದು ಕೆಲವು ಸಮಾಜವಾದಿಗಳು ಆಚರಿಸುತ್ತಿದ್ದಾರೆ. ಬೆಂಗಳೂರಿನಲ್ಲೂ ಕೆಲವು ತಿಂಗಳ ಹಿಂದೆ ಈ ಬಗ್ಗೆ ಒಂದು ಸಮಾರಂಭ ನಡೆಯಿತು.

ಕಾಂಗ್ರೆಸ್ ಸಮಾಜವಾದೀ ಪಕ್ಷದ ಆರಂಭದ ವರ್ಷಗಳಲ್ಲಿ ಅದರ ಮುಖಂಡರಲ್ಲೊಬ್ಬರಾಗಿದ್ದ ಸಿ. ಪಿ. ಐ. (ಎಂ)ನ ಪ್ರಧಾನ ಕಾರ್ಯದರ್ಶಿ ಕಾ|| ನಂಬೂದರಿಪಾಡರು ಈ ಬಗ್ಗೆ "ದಿ ಮಾರ್ಕ್ಸಿಸ್ಟ್" ನಲ್ಲಿ ಬರೆದ ಲೇಖನದ ಸಾರಾಂಶವನ್ನು "ಐಕ್ಯರಂಗ" ದ ಓದುಗರಿಗಾಗಿ ಎರಡು ಕಂತುಗಳಲ್ಲಿ ಪ್ರಕಟಿಸುತ್ತಿದ್ದೇವೆ.

ಕಾಂಗ್ರೆಸ್ ಸಮಾಜವಾದೀ ಪಕ್ಷ [ಸಿ.ಎಸ್.ಪಿ.] ಸ್ಥಾಪನೆಯಾಗಿ ಈಗ ಪೂರ್ಣ 50 ವರ್ಷಗಳಾಗಿವೆ. 1934ರ ಮೇನಲ್ಲಿ ಪಾಟ್ನಾದಲ್ಲಿ ಒಂದು ಆರಂಭಿಕ ಮಾತುಕತೆ ನಡೆದು ಜಯಪ್ರಕಾಶ್ ನಾರಾಯಣ್ ಸಂಚಾಲಕರಾಗಿದ್ದ ಒಂದು ಸಂಘಟನಾ ಸಮಿತಿಯ ಸ್ಥಾಪನೆಯೊಂದಿಗೆ ಇದರ ಆರಂಭವನ್ನು ಕಾಣಬಹುದು. ನಂತರ ಅಕ್ಟೋಬರ್ ತಿಂಗಳಲ್ಲಿ ಮುಂಬೈಯಲ್ಲಿ ನಿಯಮಿತ ಅಖಿಲ ಭಾರತ ಸಮ್ಮೇಳನ ನಡೆದು ಪಕ್ಷದ ಸಂವಿಧಾನವನ್ನು ಅಂಗೀಕರಿಸಲಾಯಿತು ಹಾಗೂ ಪ್ರಥಮ ರಾಷ್ಟ್ರೀಯ ಕಾರ್ಯಕಾರಿಣಿಯನ್ನು ಆರಿಸಲಾಯಿತು.

ಈ ಎರಡು ಸಮ್ಮೇಳನಗಳ ಸ್ವರ್ಣ ಮಹೋತ್ಸವವನ್ನು ಆಚರಿಸಲಾಗುವುದು ಎಂದು ತಿಳಿದಾಗ ನನಗೆ ಅತೀವ ಆನಂದವಾಯಿತು. ಯಾಕೆಂದರೆ ಆ ಎರಡು ಸಮ್ಮೇಳನಗಳಲ್ಲಿ ಭಾಗವಹಿಸಿದ್ದ ನಾನು ಆ ಸಂಘಟನೆ ಆಗಿನ ಯುವಕ ಕಾಂಗ್ರೆಸ್ಸಿಗರನ್ನು ತೀವ್ರಗಾಮಿಗಳಾಗಿಸುವಲ್ಲಿ ಹಾಗೂ 1930 ರ ದಶಕದಲ್ಲಿ ಒಂದು ಶಕ್ತಿಶಾಲೀ ಸಾಮ್ರಾಜ್ಯಶಾಹೀವಿರೋಧಿ ಆಂದೋಲನ ಕಟ್ಟುವಲ್ಲಿ ವಹಿಸಿದ ಪಾತ್ರದ ಬಗ್ಗೆ ಹೆಮ್ಮೆ ಪಡ ಬಹುದಾಗಿದೆ.

ಈ ಉತ್ಸವ ಯೋಜನೆಯಲ್ಲಿ ಪಾಲುಗೊಳ್ಳುವಂತೆ ನನ್ನನ್ನು ಕೇಳಲಾಯಿತು. ನನ್ನನ್ನು ಗಾಂಧೀ–ನೆಹರೂ ಸಿದ್ಧಾಂತದಿಂದ ಮಾರ್ಕ್ಸ್‌ವಾದದೆಡೆಗೆ ಕೊಂಡೊಯ್ದ ಆ ಪಕ್ಷದ ಒಳಗಣ ಹೋರಾಟಗಳ ಸಿಹಿ ಹಾಗೂ ಕಹಿ ನೆನಪುಗಳು ನನಗೆ ಖಂಡಿತಾ ಸ್ಮರಣೀಯ. ಆದರೆ 1984 ನ್ನು "ಭಾರತದ ಸಮಾಜವಾದಿ ಆಂದೋಲನದ ಸುವರ್ಣ ಮಹೋತ್ಸವ ವರ್ಷ" ಎಂದು ಆಚರಿಸುವುದನ್ನು ನಾನು ಒಪ್ಪುವುದಿಲ್ಲ. ಯಾಕೆಂದರೆ ಈ ಪಕ್ಷದ ಸ್ಥಾಪನೆ ಒಂದು ಮಹತ್ವದ ಘಟ್ಟವಾಗಿದ್ದರೂ ಕೂಡ ಭಾರತದ ಸಮಾಜವಾದೀ ಆಂದೋಲನದ "ಜನ್ಮ"ದ ಸಂಕೇತವೇನೂ ಆಗಿರಲಿಲ್ಲ. ಅದಕ್ಕೂ ಎಷ್ಟೋ ಮೊದಲೇ ಸಮಾಜವಾದೀ ಆಂದೋಲನ ಅಸ್ತಿತ್ವದಲ್ಲಿತ್ತು.

ಎರಡು ಪೂರ್ವಾಶ್ಯ ಕತೆಗಳು

1912 ರಲ್ಲಿ ಹಿಂದಿಯಲ್ಲಿ ಪ್ರಸಿದ್ಧ ಕ್ರಾಂತಿಕಾರಿ ಹರ್‌ದಯಾಲ್ ಬರೆದ ಹಾಗೂ ಮಲೆಯಾಳಂನಲ್ಲಿ ರಾಮಕೃಷ್ಣ ಪಿಳ್ಳೆ ಬರೆದ ಕಾರ್ಲ್‌ಮಾರ್ಕ್ಸ್‌ರ ಜೀವನ ಚರಿತ್ರೆಯ ಪ್ರಕಟಣೆಯೊಂದಿಗೆ ಭಾರತದಲ್ಲಿ ಸಮಾಜವಾದೀ ವಿಚಾರಧಾರೆಯ ಆರಂಭವನ್ನು ಕಾಣಬಹುದು. ಇದಕ್ಕೆ ನಾಲ್ಕು ವರ್ಷಗಳ ಮೊದಲು ಭಾರತದ ಕಾರ್ಮಿಕ ವರ್ಗದ ಮೊದಲ ರಾಜಕೀಯ ಮುಷ್ಕರ ನಡೆದಿತ್ತು. ತಿಲಕರ ಬಂಧನದ ವಿರುದ್ಧ ಮುಂಬೈಯ ಕಾರ್ಮಿಕರು ಮುಷ್ಕರ ನಡೆಸಿದ್ದರು. ಹೀಗೆ ಸಿ.ಎಸ್.ಪಿ. ಸ್ಥಾಪನೆಗೊಳ್ಳುವುದಕ್ಕಿಂತ ಕನಿಷ್ಟ ಎರಡು ದಶಕಗಳ ಮೊದಲೇ ಸಂಘಟಿತ ಸಮಾಜವಾದೀ ಆಂದೋಲನದ ಎರಡು ಪೂರ್ವ ಶರತ್ತುಗಳು ಅಂದರೆ ರಾಜಕೀಯ ಪ್ರಜ್ಞೆಯುಳ್ಳ ಕಾರ್ಮಿಕ ವರ್ಗದ ಉದಯ ಹಾಗೂ ಮಾರ್ಕ್ಸ್‌ವಾದದ ಪ್ರಚಾರ ಎರಡೂ ಇದ್ದವು.

ಪ್ರಥಮ ವಿಶ್ವಯುದ್ಧದ ನಂತರ ಕಂಡು ಬಂದ ಕ್ರಾಂತಿಕಾರೀ ಉಬ್ಬರ ಸಮರಶೀಲ ರಾಷ್ಟ್ರೀಯ ಆಂದೋಲನವನ್ನು ಬಹಳ ಹೆಜ್ಜೆ ಮುಂದೊಯ್ಯಿತು. ಅಂದಿನಿಂದ ಮುಷ್ಕರಗಳು, ಹರತಾಳಗಳು, ಪ್ರದರ್ಶನಗಳು ನಮ್ಮ ರಾಜಕೀಯ ಜೀವನದ ಸರ್ವಸಾಮಾನ ಅಂಗಗಳಾಗಿ ಬಿಟ್ಟವು. ಇದರಿಂದಾಗಿ ಸಮರಶೀಲ ಕಾರ್ಮಿಕ ವರ್ಗದ ಆ ಮಾದರಿ ಸ್ವರೂಪ, ಅಂದರೆ ಮುಷ್ಕರ, ಅದಕ್ಕೆ ಸಂಬಂಧಿಸಿದ ಸಂಘಟನೆಗಳು ಅರ್ಥಾತ್ ಕಾರ್ಮಿಕ ಸಂಘಗಳು, ಮುಷ್ಕರ ಸಮಿತಿಗಳು ಉದ್ಭವಗೊಂಡವು. ಜತೆಗೆ ಮಾರ್ಕ್ಸ್ ಎಂಗೆಲ್ಸ್ ಮತ್ತು ಲೆನಿನ್ನರ ಬೋಧೆಗಳ ವ್ಯವಸ್ಥಿತ ಪ್ರಚಾರವೂ ಆರಂಭವಾಯಿತು.

ನಿಜವಾದ ಆರಂಭ

ಏಶಿಯಾದ ಇತರ ಭಾಗಗಳಂತೆ ಭಾರತಕ್ಕೂ ಕಮ್ಯುನಿಸ್ಟ್–ಸೋಶಲಿಸ್ಟ್ ವಿಚಾರಗಳು ಬಂದದ್ದು ಬೋಲ್ಶೆವಿಕ್ ರಶ್ಯಾದ ಉದ್ಭವಕ್ಕೆ ಕಾರಣವಾದ ಯುಗಾಂತರಕಾರೀ ಘಟನೆಗಳ ವರದಿಗಳ ಮೂಲಕವೇ. ಬೋಲ್ಶೆವಿಕ್ ರಶ್ಯಾದಲ್ಲಿ ನಡೆದ ಸಮಾಜದ ಕ್ರಾಂತಿಕಾರೀ ಪರಿವರ್ತನೆಗಳಿಂದ ಸ್ಫೂರ್ತಿಗೊಂಡ ಹಾಗೂ ಕಾಂಗ್ರೆಸ್ ನಾಯಕತ್ವದ ರಾಜೀ ಧೋರಣೆಗಳಿಂದ ಬೇಸತ್ತಿದ್ದ ಕಾಂಗ್ರೆಸ್ ಕಾರ್ಯಕರ್ತರು ಎರಡು ಪರ್ಯಾಯ ಮಾರ್ಗ ಹಿಡಿದರು—ಒಂದು, ಬ್ರಿಟಿಶ್ ಆಳರಸರ ಮತ್ತು ಅವರ ಭಾರತೀಯ ದಳ್ಳಾಳಿಗಳ ವಿರುದ್ಧ ವೈಯಕ್ತಿಕ ಭಯೋತ್ಪಾದನೆಯ ಸಿದ್ಧಾಂತ ಅಥವಾ ಇನ್ನೊಂದು, ಕಮ್ಯುನಿಸಂ.

ಸುಪ್ರಸಿದ್ಧ ನಾಯಕ ಭಗತ್ ಸಿಂಗ್ ತನ್ನ ಅಂತ್ಯದ ದಿನಗಳಲ್ಲಿ ಕಮ್ಯೂನಿಸಂನ ಹತ್ತಿರ ಬಂದಿದ್ದರು, ಅವರ ಕೆಲವು ಸಹಯೋಗಿಗಳು ನಂತರ ಸಿ.ಪಿ.ಐ. ಸೇರಿದರು ಎಂಬುದು ಗಮನಾರ್ಹ. ಜಗತ್ತನ್ನೇ ನಡುಗಿಸಿದ ರಶ್ಯಾದ ಕ್ರಾಂತಿಯಿಂದ ಅಪ್ರತಿಭರಾಗಿದ್ದ ಇನ್ನು ಕೆಲವರು ಹಿಮಾಲಯದ ಗಾಢ ಹಿಮ ಹಾಗೂ ದುರ್ಗಮ ಮಾರ್ಗಗಳನ್ನು ಕ್ರಮಿಸಿ ಕ್ರಾಂತಿಯ ನಾಡಿಗೆ "ತೀರ್ಥಯಾತ್ರೆ" ಕೈಗೊಂಡರು. ಸೋಶಲಿಸಂ–ಕಮ್ಯೂನಿಸಂನ ಬೀಜಗಳನ್ನು ಭಾರತೀಯ ಮಣ್ಣಿನಲ್ಲಿ ಬಿತ್ತಿದ್ದು ಹೀಗೆ.

1920 ರ ದಶಕದ ಈ ಎರಡು ಸಮಾನಾಂತರ ಬೆಳವಣಿಗೆಗಳು, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ನ [ಐಟಕ್] ನ ಜನ್ಮ ಮತ್ತು ಆರಂಭಿಕ ಕಮ್ಯೂನಿಸ್ಟ್ ಗುಂಪುಗಳ ಉದ್ಭವದಲ್ಲೇ ನಿಜವಾಗಿ ಭಾರತದ ಸಮಾಜವಾದೀ ಆಂದೋಲನದ ಆರಂಭ ಕಂಡು ಬರುತ್ತದೆ. ಈ ಆರಂಭಿಕ ಕಮ್ಯೂನಿಸ್ಟ್ ಗುಂಪುಗಳು ಪಡಬೇಕಾಗಿ ಬಂದ ಪಾಡುಗಳು ಅವರ ಉತ್ತರಾಧಿಕಾರಿಗಳು ಯೋಚಿಸಲೂ ಸಾಧ್ಯವಿಲ್ಲದಂತಹವು. ಸಂಘಟಿತ ಸಮಾಜವಾದೀ ಆಂದೋಲನಕ್ಕೆ ಅಡಿಗಲ್ಲು ಹಾಕಿಕೊಟ್ಟ ಆ ಪ್ರಥಮ ಪೀಳಿಗೆಯ ಕಮ್ಯೂನಿಸ್ಟರ ಆತ್ಮ ತ್ಯಾಗವನ್ನು ಯಾವ ಸಮಾಜವಾದಿಯೂ ಮರೆಯಲು ಸಾಧ್ಯವಿಲ್ಲ. ಆದ್ದರಿಂದ 1984ನ್ನು «ಭಾರತದ ಸಮಾಜವಾದೀ ಆಂದೋಲನದ ಸುವರ್ಣ ಮಹೋತ್ಸವ ವರ್ಷ" ಎಂದು ಆಚರಿಸಬೇಕೆನ್ನುವುದು ನ್ಯಾಯ ಸಮ್ಮತವಲ್ಲ.

ಪಥ ಪ್ರದರ್ಶಕರ ಸಮಸ್ಯೆಗಳು

ಅಂದರೆ ಕಾಂಗ್ರೆಸ್ ಸಮಾಜವಾದೀ ಪಕ್ಷದ ರಚನಾತ್ಮಕ ಕೊಡುಗೆಯೇನೂ ಇಲ್ಲವೆಂದಾಗಲೀ ಅಥವಾ ಈ ಆದಿ ಪಥ ಪ್ರದರ್ಶಕರಲ್ಲಿ ದುರ್ಬಲತೆಗಳು, ನ್ಯೂನತೆಗಳು ಏನೇನೂ ಇರಲಿಲ್ಲವೆಂದಾಗಲೀ ಅರ್ಥವಲ್ಲ. ಅವೆಲ್ಲಾ ಇದ್ದಾಗ್ಯೂ ಸಿ ಎಸ್ ಪಿ ಹುಟ್ಟುವುದಕ್ಕೆ ಒಂದು ದಶಕಕ್ಕೂ ಮೊದಲೇ ಚಟುವಟಿಕೆ ನಡೆಸುತ್ತಿದ್ದ ಕಮ್ಯೂನಿಸ್ಟ್ ಗುಂಪುಗಳೇ ನಿಜವಾಗಿ ಭಾರತದ ಸಮಾಜವಾದೀ ಆಂದೋಲನಕ್ಕೆ ದಾರಿ ಹಾಕಿಕೊಟ್ಟವರು.

ಭಾರತದ ಕಮ್ಯೂನಿಸ್ಟ್ ಆಂದೋಲನದ ಈ ಅಗ್ರಗಾಮಿಗಳು ತಮ್ಮ ಪ್ರತಿಯೊಂದು ಹೆಜ್ಜೆಯಲ್ಲೂ ಬ್ರಿಟಿಶ್ ಆಳರಸರ ಅಸಾಧ್ಯ ಕಿರುಕುಳಗಳನ್ನು ಎದುರಿಸಬೇಕಾಯಿತು. ಭಾರತದ ಮಣ್ಣಿನಲ್ಲಿ ಕಮ್ಯೂನಿಸಂ ಬೆಳೆಯದಂತೆ ಮಾಡುವ ತಮ್ಮ ಯೋಜಿತ ಕಾರ್ಯಕ್ರಮದ ಅಂಗವಾಗಿ ಬ್ರಿಟಿಶರು ಅವರ ಮೇಲೆ ಒಂದೇ ದಶಕದಲ್ಲಿ ಪೆಶಾವರ್ ಕಾನ್ಪುರ ಹಾಗೂ ಮೀರತ್ ಹೀಗೆ ಮೂರು ಪಿತೂರಿ ಮೊಕದ್ದಮೆಗಳನ್ನು ಹೊರಿಸಿದರು.

ರಾಜಕೀಯವಾಗಿಯೂ ಕಮ್ಯೂನಿಸ್ಟರು ಭಾರತದ ಬೂರ್ಜ್ವಾ ವರ್ಗದಂತಹ ಒಂದು ಅತ್ಯಂತ ಶಕ್ತಿಶಾಲೀ ಶತ್ರುವನ್ನು ಎದುರಿಸಬೇಕಾಗಿತ್ತು. ಈ ವರ್ಗ ಆಗ ಯಾವುದೇ ವಸಾಹತುವಿನಲ್ಲಿ ಪರಾವಲಂಬೀ ದೇಶದಲ್ಲಿ ಬೆಳೆದಿದ್ದ ಅತ್ಯಂತ ಪ್ರೌಢ ಹಾಗೂ ಚತುರ ವರ್ಗವಾಗಿತ್ತು. ಬ್ರಿಟಿಶರು ಉದ್ದೇಶಪೂರ್ವಕವಾಗಿ ವಹಿಸಿದ ಧೋರಣೆಯಿಂದಾಗಿ ಈ ವಿವಿಧ ಕಮ್ಯೂನಿಸ್ಟ್ ಗುಂಪುಗಳಿಗೆ ತಮ್ಮ—ತಮ್ಮ ನಡುವೆ ಹಾಗೂ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಆಂದೋಲನದೊಂದಿಗೆ ಸತತ ಚರ್ಚೆ, ಮಾತುಕತೆ ಸಾಧ್ಯವಾಗದೇ ಹೋದುದರಿಂದ ತಮ್ಮ ತಪ್ಪುಗಳನ್ನು ಬೇಗನೇ ಸರಿಪಡಿಸಿಕೊಂಡು ಮುಂದುವರಿಯುವುದು ಅವರಿಗೆ ಕಷ್ಟವಾಗಿತ್ತು.

ಟೀಕೆ ನ್ಯಾಯ ಸಮ್ಮತವಲ್ಲ

ಇಷ್ಟೆಲ್ಲಾ ತೊಂದರೆಗಳಿದ್ದಾಗ್ಯೂ ಈ ಸಣ್ಣ ಹರಿಹಂಚಿ ಹೋಗಿದ್ದ ಸಣ್ಣ ಗುಂಪುಗಳು ಒಂದು ಸಮರಶೀಲ ಕಾರ್ಮಿಕ ಆಂದೋಲನವನ್ನು ಕಟ್ಟಿ ಬೆಳೆಸುವುದರಲ್ಲಿ ಕ್ರಾಂತಿಕಾರೀ ಸಮಾಜವಾದೀ ವಿಚಾರಧಾರೆಯನ್ನು ತೀವ್ರಗಾಮಿ ಕಾಂಗ್ರೆಸ್ಸಿಗರ ನಡುವೆ ಜನಪ್ರಿಯಗೊಳಿಸುವಲ್ಲಿ ಹಿಂದೆ ಬೀಳಲಿಲ್ಲ; ಅತ್ಯಂತ ಸೀಮಿತ ಮಟ್ಟದಲ್ಲಾದರೂ ಕೂಡಾ ಸ್ವತಃ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಧೋರಣೆಗಳ ಮೇಲೂ ಅವರ ಪ್ರಭಾವ ಬಿದ್ದಿತ್ತು. ಕಾಂಗ್ರೆಸ್ಸಿನ ಅಹಮದಾಬಾದ್ ಅಧಿವೇಶನದಲ್ಲಿ ಪ್ರತಿನಿಧಿಗಳಿಗೆ ಕೊಟ್ಟ ಘೋಷಣಾಪತ್ರದ ಮೂಲಕ ಅವರು ತಮ್ಮ ಕ್ರಾಂತಿಕಾರೀ ಕಾರ್ಯಕ್ರಮದ ಅಸ್ತಿತ್ವದ ಅರಿವು ಮಾಡಿಕೊಟ್ಟಿದ್ದರು. ಕಾಂಗ್ರೆಸ್ಸಿನೊಳಗೆ ದುಡಿಯುತ್ತಿದ್ದ ಕಮ್ಯುನಿಸ್ಟರ ಸಣ್ಣ ಗುಂಪು ಪೂರ್ಣ ಸ್ವಾತಂತ್ರ್ಯದ ಹಾಗೂ ನೇರ ಸಾಮೂಹಿಕ ಕಾರ್ಯಾಚರಣೆಯ ಪರಿಕಲ್ಪನೆಗಳನ್ನು ಜನಪ್ರಿಯಗೊಳಿಸುವಲ್ಲಿ ತೀವ್ರಗಾಮಿ ಕಾಂಗ್ರೆಸ್ಸಿಗರೊಂದಿಗೆ ಜತೆಗೂಡಿದರು.

ಇವೆಲ್ಲಕ್ಕೂ ಮಿಗಿಲಾಗಿ ಸಮರಶೀಲ ಕಾರ್ಮಿಕ ಸಂಘಟನೆ ಹಾಗೂ ಇತರ ಸಾಮೂಹಿಕ ಆಂದೋಲನಗಳನ್ನು ಕಟ್ಟಿ ಬೆಳೆಸುವಲ್ಲಿ ಕಮ್ಯುನಿಸ್ಟರು ಇತರೆಲ್ಲರಿಗಿಂತಲೂ ಹೆಚ್ಚು ಸಕ್ರಿಯರಾಗಿದ್ದರು. ಈ ಮೂಲಕ ಮಾರ್ಕ್ಸ್‌ವಾದ—ಲೆನಿನ್‌ವಾದದ ಮುಂದುವರಿದ ಸಿದ್ಧಾಂತದ ಪ್ರಚಾರ ಹಾಗೂ ಸಮರಶೀಲ ಸಾಮೂಹಿಕ ಕಾರ್ಯಾಚರಣೆಯನ್ನು ಜತೆ ಜತೆಗೇ ನಡೆಸುವುದು ಅವರಿಗೆ ಸಾಧ್ಯವಾಯಿತು.

ಆದರೂ ಸರಾಸರಿ ಕಾಂಗ್ರೆಸ್ಸಿಗರ ಮೇಲೆ ಸಂಘಟಿತ ಕಮ್ಯುನಿಸ್ಟ್ ಆಂದೋಲನದ ಪ್ರಭಾವ ಏನೇನೂ ಇರಲಿಲ್ಲ ಎಂದೇ ಹೇಳಬೇಕು. ವಾಸ್ತವವಾಗಿ ಅವರು ಬ್ರಿಟಿಷ್ ಆಳರಸರು ಹರಡಿದ್ದ ಕಮ್ಯುನಿಸ್ಟ್ ವಿರೋಧೀ ಪೂರ್ವಾಗ್ರಹಗಳಿಗೆ ಬಲಿಯಾಗಿದ್ದರು. ಇದಕ್ಕೆ ಮುಖ್ಯ ಕಾರಣ ಕಾಂಗ್ರೆಸ್‌ನೊಳಗೆ ಎಡ ಮತ್ತು ಬಲ ಪಂಥಗಳ ನಡುವೆ ತೀವ್ರ ಸೆಣಸಾಟ ನಡೆಯುತ್ತಿರುವಾಗ ಪ್ರಮುಖ ಕಮ್ಯುನಿಸ್ಟ್ ಮುಂದಾಳುಗಳು ಹಾಗೂ ಪಕ್ಷದ ಪರವಾಗಿದ್ದ ಕಾರ್ಮಿಕ ಮುಂದಾಳುಗಳು ವಿವಿಧ ಪಿತೂರಿ ಮೊಕದ್ದಮೆಗಳನ್ನು ಎದುರಿಸುತ್ತಿದ್ದರು. ಪೂರ್ಣ ನಾಲ್ಕು ವರ್ಷಗಳ ಕಾಲ [1929–33] ಕಮ್ಯುನಿಸ್ಟ್ ಪಕ್ಷದ ಅಖಿಲ—ಭಾರತ ಕೇಂದ್ರವೆಂಬುದೇ ಇರಲಿಲ್ಲ. ಆದ್ದರಿಂದ ಹೊಸದಾಗಿ ಸ್ಥಾಪಿತಗೊಂಡ ಕಾಂಗ್ರೆಸ್ ಸಮಾಜವಾದೀ ಪಕ್ಷದ ನಾಯಕರು ವಾದಿಸಿದಂತೆ ರಾಷ್ಟ್ರೀಯ ಆಂದೋಲನದ ಮೇಲೆ ಆಗ ಕಮ್ಯುನಿಸ್ಟರ ಪ್ರಭಾವ ಏನೇನೂ ಇಲ್ಲ ಎನ್ನುವ ಟೀಕೆ ನ್ಯಾಯ ಸಮ್ಮತವಲ್ಲ.

ಸಿ. ಎಸ್. ಪಿ. ಜನ್ಮಕ್ಕೆ ಕಾರಣ

ಒಂದೆಡೆ ಬಂಡವಾಳಶಾಹೀ ಸಮಾಜ ಅತ್ಯಂತ ಆಳವಾದ ಬಿಕ್ಕಟ್ಟು ಎದುರಿಸುತ್ತಿದ್ದಾರೆ ತದ್ವಿರುದ್ಧವಾಗಿ ರಷ್ಯಾದಲ್ಲಿ ಯುಗಾಂತರಕಾರೀ ಪ್ರಥಮ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗಿ ಜಾರಿಗೊಳ್ಳುತ್ತಿತ್ತು. ಸಮಾಜವಾದದ ಸಿದ್ಧಾಂತಗಳು ಈಗ ಕೇವಲ ತತ್ವಶಾಸ್ತ್ರದ ಅಮೂರ್ತ ಪ್ರಶ್ನೆಗಳಾಗಿರದೆ ತಮ್ಮ ಶ್ರೇಷ್ಠತೆಯನ್ನು ಸಾಧಿಸಿ ತೋರಿಸುತ್ತಿದ್ದ ನೀತಿಗಳು ಎಂಬುದನ್ನು ಭಾರತದ ಸಾಮ್ರಾಜ್ಯಶಾಹಿ–ವಿರೋಧಿ ಕಾಂಗ್ರೆಸ್ಸಿಗರು ಸ್ವತಃ ನೋಡುತ್ತಿದ್ದರು. ಅವರ ಮೇಲೆ ಮಾರ್ಕ್ಸ್‌ವಾದ–ಲೆನಿನ್‌ವಾದ ಪ್ರಭಾವ ಬೀರಲಾರಂಭಿಸಿತು.

ಅವೇ ಸಮಯದಲ್ಲಿ 1930ರ ಉಪ್ಪು ಸತ್ಯಾಗ್ರಹ ಹಾಗೂ 1932–33ರ ದ್ವಿತೀಯ ಅಸಹಕಾರ ಚಳುವಳಿಯ ನಂತರ ಮಹಾತ್ಮಾಗಾಂಧಿ ಪ್ರತಿನಿಧಿಸುತ್ತಿದ್ದ ರಾಷ್ಟ್ರೀಯ ಮುಖಂಡತ್ವ ಅನುಸರಿಸಿದ ಸಂಧಾನ ರಾಜಕೀಯ ಹಾಗೂ ಚುನಾವಣೆಯಲ್ಲಿ ಭಾಗವಹಿಸಬೇಕೆನ್ನುವವರ ವಾದಗಳಿಂದ ತೀವ್ರಗಾಮೀ ಕಾಂಗ್ರೆಸ್ಸಿಗರಿಗೆ ಗಾಂಧಿವಾದಿ ಧೋರಣೆಗಳು ಹಾಗೂ ಕಾರ್ಯಕ್ರಮಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಮೂಡಲಾರಂಭಿಸಿತ್ತು.

ಅಲ್ಲದೆ ಅವರಾಗಲೇ ಕಾರ್ಮಿಕ ವರ್ಗದ ಮುಷ್ಕರವೆಂಬ ಆಯುಧದ ಸಮರ್ಪಕತೆಯನ್ನು ಕಂಡಿದ್ದರು. ಇವೆಲ್ಲದರಿಂದಾಗಿ ಅವರು ಕಾರ್ಮಿಕ ವರ್ಗವನ್ನು ಸಂಘಟಿಸುವ ಬಗ್ಗೆ ಯೋಚಿಸಲಾರಂಭಿಸಿ ತನ್ಮೂಲಕ ಕಮ್ಯುನಿಸಂ ಹಾಗೂ ಸೋಶಲಿಶಂನತ್ತ ಆಕರ್ಷಿತರಾದರು.

ಕಾಂಗ್ರೆಸ್ಸಿನೊಳಗಿನ ಈ ಬೆಳವಣಿಗೆಗಳೇ ಸಿ. ಎಸ್. ಪಿ. ಯ ಜನ್ಮಕ್ಕೆ ನೇರ ಕಾರಣ. 1934ರ ಅಕ್ಟೋಬರ್‌ನಲ್ಲಿ ಮುಂಬೈಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಒಂದೆಡೆ ಗಾಂಧಿ ಹಾಗೂ ಚುನಾವಣೆ ವಾದಿಗಳು ಮತ್ತು ಇನ್ನೊಂದೆಡೆ ಸಮಾಜವಾದಿಗಳ ನೇತೃತ್ವದಲ್ಲಿದ್ದ ಎಡ ಪಂಥೀಯರ ನಡುವಿನ ರಭಸದ ವಾಗ್ವಾದಗಳ ಕಣವಾಗಿತ್ತು. ಆಗ ತಾನೇ ಹುಟ್ಟಿದ್ದ ಸಿ. ಎಸ್. ಪಿ. "ವಿರೋಧೀ ನಾಯಿಕ" ನಾಗಿ ಮುಂದೆ ಬಂತು. ಅದರ ಪ್ರಥಮ ಅಖಿಲ ಭಾರತ ಸಮ್ಮೇಳನ ಈ ಹೋರಾಟದ ತಯಾರಿಗೆ ನೆರವಾದಂತಾಯಿತು. ಅದು ಕಾಂಗ್ರೆಸ್‌ನ ಸಮ್ಮುಖ ಇದ್ದ ಸಮಸ್ಯೆಗಳ ಬಗ್ಗೆ ಎಡಪಂಥೀಯರ ನಿಲುವನ್ನು ಸ್ಪಷ್ಟವಾಗಿ ರೂಪಿಸುವ ಪ್ರಯತ್ನ ಆಗಿತ್ತು. ಆದರೆ ಅತ್ತ ಆಗಷ್ಟೇ ತಮ್ಮ ಅಖಿಲಭಾರತ ಕೇಂದ್ರವನ್ನು ಸ್ಥಾಪಿಸಿದ್ದ ಸಿ.ಪಿ.ಐ. ಮೇಲೆ ಬ್ರಿಟಿಶರ ನಿಷೇಧವಿದ್ದುದರಿಂದ ಕಮ್ಯುನಿಸ್ಟರು ತಲೆಮರೆಸಿಕೊಂಡಿರಬೇಕಾಗಿತ್ತು. ಆದ್ದರಿಂದ ಸ್ವಾಭಾವಿಕವಾಗಿಯೇ ಈ ಘಟ್ಟದಲ್ಲಿ ಎಡಪಂಥದ ಬೆಳವಣಿಗೆಯ ಮೇಲೆ ಅವರ ಪ್ರಭಾವ ಅಲ್ಪವಾಗಿತ್ತು.

"ಸಮಾಜವಾದ ಏಕೆ ?"

ಕಾಂಗ್ರೆಸ್ ಸಮಾಜವಾದೀ ಪಕ್ಷದ ಜನ್ಮ ಹಾಗೂ ಬೆಳವಣಿಗೆಗೆ ಕಾರಣವಾದ ಅಗಾಧ ಪ್ರಮಾಣದ ಸಾಮಗ್ರಿಗಳಲ್ಲಿ ಪ್ರಮುಖ ಸ್ಥಾನ ಸಲ್ಲಬೇಕಾದುದು ಜಯಪ್ರಕಾಶ್ ನಾರಾಯಣರು ಬರೆದ ಪುಸ್ತಕ **'Why Socialism'** [ಸಮಾಜವಾದ ಏಕೆ ?]ಗೆ ವೈಯಕ್ತಿಕ ಉದಾಹರಣೆಯೊಂದಿಗೆ ಹೇಳಬೇಕಾದರೆ, ಕಾಂಗ್ರೆಸ್ಸಿನ ಬಲ ಪಂಥೀಯ ನಾಯಕರ ಕಾರ್ಯಕ್ರಮಗಳು ಮತ್ತು ಆಚರಣೆಗಳ ನಿರರ್ಥಕತೆಯಿಂದ ಇತರ ಯುವಕ ಕಾಂಗ್ರೆಸ್ಸಿಗರಂತೆ ಬೇಸತ್ತಿದ್ದ ಕೇರಳದ ಯುವಕ ಕಾಂಗ್ರೆಸ್ಸಿಗರಾದ ನಮಗೆ ಜೆ. ಪಿ. ಯವರ ಈ ಪುಸ್ತಕ ಹೊಸ ಮಾರ್ಗ ತೋರಿಸಿ ಕೊಟ್ಟಿತು. ಸಮಾಜವಾದದ ದಾರಿ ಹೇಗೆ ಗಾಂಧೀ ವಾದಕ್ಕಿಂತ, ಅದೇ ರೀತಿ ಚುನಾವಣಾ ಮಾರ್ಗ ಹಾಗೂ ವೈಯಕ್ತಿಕ ಭಯೋತ್ಪಾದಕ ಮಾರ್ಗಕ್ಕಿಂತ ಬಹಳ ಶ್ರೇಷ್ಠವಾದದ್ದು ಎಂಬುದನ್ನು ನಮಗೆ ಅದು ತೋರಿಸಿ ಕೊಟ್ಟಿತು. ಹೊಸ ಸಿದ್ಧಾಂತವೊಂದಕ್ಕಾಗಿ ತಡಕಾಡುತ್ತಿದ್ದ ಕಾಂಗ್ರೆಸ್ಸಿನ ಯುವಕ, ಯುವತಿಯರಿಗೆ ಇದು ಒಂದು ಪಠ್ಯ ಪುಸ್ತಕವಾಗಿಬಿಟ್ಟಿತು.

ಜೆ.ಪಿ. ಯವರ ಈ ಪುಸ್ತಕದ ತಿರುಳೇನೆಂದರೆ— ಸಮಾಜವಾದ ಒಂದು ಅಂತಿಮಗುರಿಯಾಗಿ ಅಪೇಕ್ಷಣೀಯ ಮಾತ್ರವೇ ಅಲ್ಲ, ದೇಶಕ್ಕೆ ಸ್ವಾತಂತ್ರ್ಯ ಗಳಿಸುವಲ್ಲಿಯೂ ಅದು ಅತ್ಯಂತ ಪರಿಣಾಮಕಾರಿ ಸಾಧನ ಎಂಬುದು.ಆದುದರಿಂದ ಆ ಪುಸ್ತಕದಲ್ಲಿ ಗಾಂಧೀವಾದೀ ಕಾರ್ಯಕ್ರಮದ, ಗಾಂಧೀ ಜಿಯ ಪೂರ್ಣ ಆಶೀರ್ವಾದದೊಂದಿಗೆ ಬಲ ಪಂಥೀಯ ಮುಖಂಡರು ಅನುಸರಿಸುತ್ತಿದ್ದ ಚುನಾವಣೋನ್ಮುಖ ಮಾರ್ಗದ ಹಾಗೂ ಕ್ರಾಂತಿಕಾರಿ ಗುಂಪುಗಳ ವೈಯಕ್ತಿಕ ಭಯೋತ್ಪದಕತೆಯ ಮಾರ್ಗದ ತೀಕ್ಷ್ಣ ಟೀಕೆ ಇತ್ತು. ಆಗ ಮಹಾತ್ಮಾಗಾಂಧಿ ಪ್ರತಿಪಾದಿಸಿದ್ದ ಪರಿಕಲ್ಪನೆ ಕಾಂಗ್ರೆಸ್ಸನ್ನು ಒಂದು ರಾಜಕೀಯೇತರ ಸೇವಾಸಂಘವಾಗಿ ಮತ್ತು ಒಂದು ಚುನಾವಣಾ ಹೋರಾಟ ನಡೆಸಬಹುದಾದ ಒಂದು ದಕ್ಷ ಯಂತ್ರವಾಗಿ ಪರಿವರ್ತಿಸ ಬಹುದಾಗಿತ್ತಷ್ಟೆ.

ದುಡಿಯುವ ವರ್ಗಗಳ ಸಂಘಟನೆ

ಆದರೆ ತದ್ವಿರುದ್ಧವಾಗಿ ಜೆ.ಪಿ. ಯವರು ಅಸಹಕಾರ ಚಳುವಳಿಯ ಕಾಲದ ನಮ್ಮ ಅನುಭವಗಳನ್ನು ಉತ್ತಮ ಪಡಿಸಿಕೊಂಡು ಕಾರ್ಮಿಕ ವರ್ಗದ ಸಂಯುಕ್ತ ಬಲವನ್ನು ಬೆಳೆಸುವುದೇ ಶಕ್ತಿಶಾಹೀ ಬ್ರಿಟಿಶ್ ಆಳ್ವಿಕೆಯನ್ನು ಮುರಿಯುವ ಏಕಮಾತ್ರ ವಿಧಾನ ಎಂದು ಪ್ರತಿಪಾದಿಸಿದರು. ತಮ್ಮ ಭಾಷಣಗಳಲ್ಲಿ, ಚರ್ಚೆಗಳಲ್ಲಿ ಕಾರ್ಮಿಕ ಸಂಘಟನೆಗಳು ಹಾಗೂ ಕಿಸಾನ್ ಸಭಾಗಳನ್ನು ಸಂಘಟಿಸದೆ ಸ್ವಾತಂತ್ರ್ಯ ಗಳಿಸುವ ನಿರ್ಣಾಯಕ ಹೋರಾಟ ನಡೆಸುವುದಾಗಲೀ, ಕಾಂಗ್ರೆಸ್ ನಾಯಕತ್ವದ ರಾಜಿ ಧೋರಣೆಗಳ ವಿರುದ್ಧ ಹೋರಾಡುವುದಾಗಲೀ ಸಾಧ್ಯವಿಲ್ಲ ಎಂದು ಅವರು ನಮಗೆ ವಿವರಿಸುತ್ತಿದ್ದರು.

ಜೆ. ಪಿ. ಯವರು ಸೋಶಲಿಸ್ಟ್ ಇಂಟರ್‌ನ್ಯಾಶನಲ್‌ನ ನಾಯಕರಂತೆ "ಪ್ರಜಾಪ್ರಭುತ್ವವಾದೀ ಸಮಾಜವಾದ"ದ ವಿಚಾರ ಹೊಂದಿದವರಾಗಿದ್ದರೂ ಕೂಡಾ ಎಲ್ಲಕ್ಕೂ ಮಿಗಿಲಾಗಿ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಬೂರ್ಜ್ವಾ ನಾಯಕತ್ವ ಭದ್ರಪಡಿಸಿಕೊಂಡಿದ್ದ ನೇತೃತ್ವದ ಸ್ಥಾನಕ್ಕೆ ಸವಾಲೆಸೆಯುವ ಒಂದು ಹೊಸ ಮಾರ್ಗಕ್ಕಾಗಿ ತಡಕಾಡುತ್ತಿದ್ದ ಒಬ್ಬ ತೀವ್ರಗಾಮೀ ಕಾಂಗ್ರೆಸ್ಸಿಗರಾಗಿದ್ದರು. ಅವರು ತೋರಿಸಿಕೊಟ್ಟ ಈ ಮಾರ್ಗ ಎಷ್ಟೊಂದು ಆಕರ್ಷಕವಾಗಿತ್ತೆಂದರೆ ಕೆಲವೇ ತಿಂಗಳಲ್ಲಿ ಸಾವಿರಾರು ಕಾಂಗ್ರೆಸ್ ಯುವ ಜನರು ಅದಕ್ಕೆ ಧುಮುಕಿದರು.

ಆದರೆ ಮೊದಲೇ ಹೇಳಿದಂತೆ ಜೆ.ಪಿ. ಹಾಗೂ ಅವರ ಸಂಗಾತಿಗಳು ನಿರ್ವಾತದಲ್ಲೇನೂ ಕಾರ್ಯನಿರ್ವಹಿಸುತ್ತಿರಲಿಲ್ಲ. ತಮ್ಮನ್ನು ಕಮ್ಯುನಿಸ್ಟರೆಂದು ಘೋಷಿಸಿಕೊಂಡಿದ್ದ, ಸಾಮ್ರಾಜ್ಯಶಾಹಿ ಒಡ್ಡಿದ ಅಡ್ಡಿ-ಆತಂಕಗಳನ್ನು ಎದುರಿಸಿ ದುಡಿಯುತ್ತಿದ್ದ ಭಾರತೀಯ ಸಮಾಜವಾದಿಗಳ ಪ್ರಥಮ ಪೀಳಿಗೆಯವರ ಅನುಭವ ಜೆ. ಪಿ. ಹಾಗೂ ಅವರ ಸಂಗಾತಿಗಳ ಮುಂದಿತ್ತು. ಆದರೆ ಭಾರತದಲ್ಲಿ ಸಮಾಜವಾದದ ಹೋರಾಟವನ್ನು ಹೇಗೆ ಸಂಘಟಿಸಬೇಕು, ಭಾರತೀಯ ಬೂರ್ಜ್ವಾವರ್ಗದ ನಾಯಕತ್ವ ಹಾಗೂ ಪ್ರಾಬಲ್ಯದಲ್ಲಿದ್ದ ಕಾಂಗ್ರೆಸ್ ಸಮಾಜವಾದದ ಹೋರಾಟದ ಸಾಧನವಾಗಿ ಬೆಳೆಯಲು ಸಾಧ್ಯವೇ ಎಂಬ ಬಗ್ಗೆ ಈ ಇಬ್ಬರ ವಿಚಾರಗಳು ಪರಸ್ಪರ ವಿರುದ್ಧವಾಗಿದ್ದವು.

ಸಿ. ಎಸ್. ಪಿ.ಯ ಮೀರತ್ ದಸ್ತಾವೇಜು

ಸಿ ಎಸ್ ಪಿ ಹಾಗೂ ಸಿ ಪಿ ಐ ವಕ್ತಾರರ ನಡುವೆ ಗಂಭೀರ ಚರ್ಚೆಗಳು ನಡೆದವು. ಈ ಚರ್ಚೆಗಳ ಫಲಿತಾಂಶವನ್ನು ಸಿ ಎಸ್ ಪಿ 1936 ರಲ್ಲಿ ಮೀರತ್‌ನಲ್ಲಿ ನಡೆದ ತನ್ನ ಎರಡನೇ ರಾಷ್ಟ್ರೀಯ ಸಮ್ಮೇಳನದಲ್ಲಿ ಅಂಗೀಕರಿಸಿದ ದಸ್ತಾವೇಜಿನಲ್ಲಿ ವಿವರಿಸಲಾಗಿದೆ. ಇದೇ ಪ್ರಸಿದ್ಧ "ಮೀರತ್ ಪ್ರಬಂಧ".

ಇ. ಎಂ. ಎಸ್. ನಂಬೂದಿರಿಪಾಡ್

ಈ ಪ್ರಬಂಧ ರಾಷ್ಟ್ರೀಯ ಆಂದೋಲನಕ್ಕೆ ಹೊಸ ದಿಕ್ಕು ನೀಡಬೇಕಾಗಿದೆ. ಅದರ ಕಾರ್ಯವಿಧಾನಗಳನ್ನು ಪರಿಷ್ಕರಿಸಬೇಕಾಗಿದೆ ಎಂದು ಹೇಳಿ ನಮ್ಮ ಸಮಾಜದ ಶಕ್ತಿಗಳ ಪೂರ್ಣ ಸೈದ್ಧಾಂತಿಕ ಅರಿವು ಇದ್ದವರು ಮಾತ್ರ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ ಇಡಲು ಶಕ್ತರಾಗುವರು ಎಂದಿತ್ತು—"ಇಂತಹವರು, ಸ್ವಾಭಾವಿಕವಾಗಿಯೇ, ಮಾರ್ಕ್ಸ್ ಸಮಾಜವಾದದ ಪ್ರಭಾವಕ್ಕೊಳಗಾಗಿ ಅದನ್ನು ಸ್ವೀಕರಿಸಿರುವ ಕಾಂಗ್ರೆಸ್ಸಿಗರು."

ಅದಾಗಲೇ ಅಸ್ತಿತ್ವದಲ್ಲಿದ್ದ ಸಮಾಜವಾದೀ ಶಕ್ತಿಗಳು ಕಾಂಗ್ರೆಸ್‌ನೊಡನೆ ಸಂಪರ್ಕಹೊಂದಿಲ್ಲದೆ ರಾಷ್ಟ್ರೀಯ ಆಂದೋಲನದ ಮೇಲೆ ಏನೊಂದೂ ಪ್ರಭಾವ ಬೀರದಿದ್ದುದರಿಂದ ಆ ಗುಂಪುಗಳೊಂದಿಗೆ ನವೋದಿತ ಸಿ ಎಸ್ ಪಿ ಯ ಬೆಸುಗೆ ಸಾಧ್ಯವಾಗಲಿಲ್ಲ ಎಂದು ಅಭಿಪ್ರಾಯ ಪಟ್ಟ ಆ ದಸ್ತಾವೇಜು "ಸಂಬಂಧಪಟ್ಟ ಪಕ್ಷಗಳು ಸರಿಯಾದ ತಂತ್ರಗಳನ್ನು ಅಂಗೀಕರಿಸಿದರೆ ಮುಂದಿನ ಒಂದು ಘಟ್ಟದಲ್ಲಾದರೂ ಇಂತಹ ಬೆಸುಗೆ ನಡೆಯುವ ಸಂಭವವಿದೆ" ಎಂದು ಹೇಳಿತ್ತು.

"ರಾಷ್ಟ್ರೀಯ ಆಂದೋಲನವನ್ನು ಒಂದು ನಿಜವಾದ ಸಾಮ್ರಾಜ್ಯಶಾಹೀ ವಿರೋಧೀ ಆಂದೋಲನವಾಗಿ ವಿದೇಶೀ ಶಕ್ತಿಗಳಿಂದ ಹಾಗೂ ಸ್ಥಳೀಯ ಶೋಷಣಾ ವ್ಯವಸ್ಥೆಯಿಂದ ಸ್ವಾತಂತ್ರ್ಯ ಸಾಧಿಸುವ ಉದ್ದೇಶವುಳ್ಳ ಒಂದು ಆಂದೋಲನವಾಗಿ ಬೆಳೆಸಬೇಕಾಗಿದೆ. ಹೀಗೆ ಮಾಡಬೇಕಾದರೆ ಕಾಂಗ್ರೆಸ್‌ನೊಳಗಿರುವ ಸಾಮ್ರಾಜ್ಯಶಾಹೀ ವಿರೋಧೀ ಶಕ್ತಿಗಳನ್ನು ಸದ್ಯದ ಬೂರ್ಜ್ವಾ ನಾಯಕತ್ವದಿಂದ ದೂರ ಸೆಳೆದು ಕ್ರಾಂತಿಕಾರೀ ಸಮಾಜವಾದದ ನಾಯಕತ್ವದ ಕೆಳಗೆ ತರಬೇಕಾಗಿದೆ. ಇದನ್ನು ಕೇವಲ ಕಾಂಗ್ರೆಸ್‌ನೊಳಗಿರುವ ಮಾರ್ಕ್ಸೀಯ ಸಮಾಜವಾದಿಗಳ ಸಂಘಟನೆ ಮಾತ್ರ ಮಾಡಬಲ್ಲದು"

"ಮಾರ್ಕ್ಸ್‌ವಾದೀ ಧೋರಣೆ"

ತನ್ನ ಕಾರ್ಯತಂತ್ರದ ಬಗ್ಗೆ ಹೇಳುತ್ತಾ "ಕಾಂಗ್ರೆಸ್ ವೇದಿಕೆಗಳಲ್ಲಿ ಸತತವಾಗಿ ಕೇವಲ ಸಾಮ್ರಾಜ್ಯಶಾಹೀ ವಿರೋಧೀ ಧೋರಣೆಗಳನ್ನೇ ತಳೆಯಬೇಕು" ಎಂದಿರುವ ದಸ್ತಾವೇಜು ಈ ಸಂದರ್ಭದಲ್ಲಿ ಕಾಂಗ್ರೆಸ್ಸಿನೆದುರು ಸಮಾಜವಾದೀ ಕಾರ್ಯಕ್ರಮವನ್ನು ಪ್ರಸ್ತುತ ಪಡಿಸುವ, ಕಾಂಗ್ರೆಸ್ ಚುನಾವಣೆಗಳಲ್ಲಿ ಕಮಿಟಿಗಳನ್ನು "ವಶಪಡಿಸಿ"ಕೊಳ್ಳುವ ತಪ್ಪು ಮಾಡಬಾರದು ಎಂದು ಹೇಳಿತ್ತು. ಮುಂದುವರಿದು "ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಕ್ರಮಗಳಿಗೆ ಅಡ್ಡ ಬರಬಾರದು ಆದರೆ ಅದನ್ನು ವೈಜ್ಞಾನಿಕವಾಗಿ ಟೀಕಿಸಿ ಬಯಲಿಗೆಳೆಯಬೇಕು" ಎಂದೂ ಹೇಳಿತ್ತು.

"ಪಕ್ಷದ ಸ್ವಂತ ಕಾರ್ಯಕ್ರಮ ಮಾರ್ಕ್ಸ್‌ವಾದಿಯಾಗಿರಬೇಕು ಎಂಬುದು ಸ್ಪಷ್ಟ. ಇಲ್ಲವಾದರೆ ತನ್ನ ಗುರಿಯನ್ನು, ಮುಖಂಡತ್ವವನ್ನು ಸಾಧಿಸಲು ಅದು ವಿಫಲವಾಗುತ್ತದೆ. ಮಾರ್ಕ್ಸ್‌ವಾದ ಮಾತ್ರ ಸಾಮ್ರಾಜ್ಯಶಾಹೀ—ವಿರೋಧಿ ಶಕ್ತಿಗಳಿಗೆ ಅವುಗಳ ಅಂತಿಮ ಗುರಿಯತ್ತ ಮಾರ್ಗದರ್ಶನ ನೀಡಬಲ್ಲದು. ಆದ್ದರಿಂದ ಪಕ್ಷದ ಸದಸ್ಯರು ಕ್ರಾಂತೀಯ ತಂತ್ರಗಳನ್ನು, ವರ್ಗಹೋರಾಟದ ಸಿದ್ಧಾಂತ ಹಾಗೂ ಕಾರ್ಯಾಚರಣೆಗಳನ್ನು, ಪ್ರಭುತ್ವದ ಸ್ವಭಾವವನ್ನು ಹಾಗೂ ಸಮಾಜವಾದೀ ಸಮಾಜದೆಡೆಗೆ ಒಯ್ಯುವ ಪ್ರಕ್ರಿಯೆಯನ್ನು ಪೂರ್ಣವಾಗಿ ತಿಳಿದುಕೊಳ್ಳಬೇಕು"

ಮೀರತ್ ಪ್ರಬಂಧವನ್ನು ಅಂಗೀಕರಿಸಿದ ಒಂದು ವರ್ಷದ ನಂತರ ಫೈಜ್‌ಪುರದಲ್ಲಿ ಸಿ ಎಸ್ ಪಿ ಯ ಮೂರನೇ ಸಮ್ಮೇಳನ ನಡೆಯಿತು. ಮೀರತ್ ಪ್ರಬಂಧದ ಕೆಲವು ವಿಚಾರಗಳನ್ನು ಅಲ್ಲಿ ಮತ್ತಷ್ಟು ಅಭಿವೃದ್ಧಿ ಪಡಿಸಲಾಯಿತು. 'ಕಾಂಗ್ರೆಸ್ ಒಂದು ಸಾಮೂಹಿಕ ಸಂಘಟನೆಯಾಗಿದ್ದರೂ ಅದರ ನಾಯಕತ್ವದ ಮೇಲೆ ಬೂರ್ಜ್ವಾ ಪ್ರಾಬಲ್ಯವಿದೆ ತನ್ನ ಪರಿಕಲ್ಪನೆ ಹಾಗೂ ಹಿತಾಸಕ್ತಿಗಳ ಚೌಕಟ್ಟಿನೊಳಗೆ ಬೆಳೆಯಲು ಜನಸಮೂಹದ ಹೋರಾಟಗಳನ್ನು ಉನ್ನತ ಮಟ್ಟಕ್ಕೆ ಒಯ್ಯಲು ಆ ನಾಯಕತ್ವಕ್ಕೆ ಸಾಧ್ಯವಿಲ್ಲ....ನಮ್ಮ ಗುರಿ ಕಾಂಗ್ರೆಸ್ಸನ್ನು ಬೆಳೆಸಿ, ವಿಸ್ತೃತಗೊಳಿಸಿ ಒಂದು ಶಕ್ತಿಶಾಲೀ ಸಾಮ್ರಾಜ್ಯಶಾಹೀ-ವಿರೋಧೀ ರಂಗವಾಗಿ ಪರಿವರ್ತಿಸುವುದೇ ಆಗಿದೆ."

ಐಕ್ಯತೆಯ ಆಕಾಂಕ್ಷೆ

ಸಮಾಜವಾದೀ ಶಕ್ತಿಗಳ ಕ್ರೋಢೀಕರಣಕ್ಕೆ ಈ ಪರಿವರ್ತನೆ ಅಗತ್ಯ ಎಂದು ಈ ಫೈಜ್‌ಪುರ ಪ್ರಬಂಧ- "ಸಿ ಎಸ್ ಪಿ ಆರಂಭದಿಂದಲೂ ಸಮಾಜವಾದೀ ಶಕ್ತಿಗಳ ಐಕ್ಯತೆ ಬಯಸಿದೆ ಸಮಾಜವಾದೀ ಶಕ್ತಿಗಳ ನಡುವೆ ಐಕ್ಯತೆ ಹಾಗೂ ಸಮಾನ ಅಭಿಪ್ರಾಯ ಅಗತ್ಯ ಮಾತ್ರವಲ್ಲ. ಎಡಪಂಥೀಯ ಶಕ್ತಿಗಳ ನಾಯಕತ್ವದ ನಡುವೆ ಒಂದು ಪರಸ್ಪರ ಅರಿವು ಮೂಡಬೇಕಾದದು ಅಗತ್ಯ" ಎಂದಿತ್ತು.

ಈ ರೀತಿ ಹೊಸದಾಗಿ ಸ್ಥಾಪಿತಗೊಂಡ ಸಿ ಎಸ್ ಪಿ ಯ ನಾಯಕತ್ವ ತನಗೂ ಮೊದಲಿದ್ದ ಸೋಶಲಿಸ್ಟ್—ಕಮ್ಯೂನಿಸ್ಟ್ ಗುಂಪುಗಳು ಹಾಗೂ ಕಾಂಗ್ರೆಸ್ ನಡುವಿನಿಂದ ಮೂಡಿ ಬಂದ ಸೋಶಲಿಸ್ಟ್ ನಡುವಿನ ಕಂದಕವನ್ನು ಮುಚ್ಚಲು ಪ್ರಯತ್ನಿಸುತ್ತಿತ್ತು ಎಂಬುದನ್ನು ಇಲ್ಲಿ ಕಾಣಬಹುದಾಗಿದೆ. ಸಿ ಎಸ್ ಪಿ ಹಾಗೂ ಸಂಯುಕ್ತ ಕಾರ್ಯಾಚರಣೆಗಿಳಿಯಬೇಕೆಂಬ ದೃಷ್ಟಿ ಇದರ ಕೇಂದ್ರವಾಗಿತ್ತು. ಅದಕ್ಕನುಸಾರವಾಗಿ ಈ ಎರಡು ಪಕ್ಷಗಳ ನಡುವೆ ಒಂದು ಒಪ್ಪಂದ ಏರ್ಪಟ್ಟು ಈ ಎರಡು ಪಕ್ಷಗಳ ಪ್ರಧಾನ ಕಾರ್ಯದರ್ಶಿಗಳಾದ ಜಯಪ್ರಕಾಶ್ ನಾರಾಯಣ್ ಹಾಗೂ ಪಿ. ಸಿ. ಜೋಷಿ ಅದಕ್ಕೆ ಸಹಿ ಹಾಕಿದರು.

[ಮುಂದುವರಿಯುವುದು]

ಬೀಡಿ ಕಾರ್ಮಿಕರ ಸಭೆ

ದಿನಾಂಕ : 28—10—84 ರಂದು ಬೀಡಿ ಕೆಲಸಗಾರರು ಕಾ| ಕೆ. ಚಂದುಕುಟ್ಟಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶಿವಮೊಗ್ಗ ಜಿಲ್ಲಾ ಬೀಡಿ ಕಾರ್ಮಿಕರ ಸಂಘವನ್ನು ಸ್ಥಾಪಿಸಿದರು.

ಸಭೆಯನ್ನು ಉದ್ದೇಶಿಸಿ ಕಾರ್ಮಿಕ ಮುಖಂಡರೂ ಹಾಗೂ ವಕೀಲರೂ ಆದ ಕಾ. ಜಿ. ತಿರಕಪ್ಪ, ಭದ್ರಾವತಿ ಉಕ್ಕು ಕಾರ್ಮಿಕ ಒಕ್ಕೂಟದ ನಾಯಕರು ಹಾಗೂ ಹಮಾಲಿಕಾರ್ಮಿಕಸಂಘದ ಕಾರ್ಯದರ್ಶಿಗಳೂ ಆದ ಕಾ. ಪುಟ್ಟಸ್ವಾಮಿ, ಹಂಸಾರಿ, ಬಿ.ಪಿ. ಅಬ್ದುಲ್ ಸಲಾಂಶರೀಫ್ ಮುಂತಾದವರು ಕಾರ್ಮಿಕರನ್ನು ಉದ್ದೇಶಿಸಿ, ಕಾರ್ಮಿಕ ಸಂಘದ ಮಹತ್ವ, ರಾಜ್ಯ ಬೀಡಿ ಕಾರ್ಮಿಕ ಹೋರಾಟದ ಪರಂಪರೆಯನ್ನು ತಿಳಿಸಿದರು. ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯ್ತು.

ಅಧ್ಯಕ್ಷರು ಜಿ. ಪಿ.ಅಬ್ದುಲ್‌ಸಲಾಂ, ಉಪಾಧ್ಯಕ್ಷರುಗಳು ಫಾರೂಕ್ ಮತ್ತು ಕರೀಂಸಾಬ್, ಕಾರ್ಯದರ್ಶಿ ಎಸ್.ಸಿ. ಶಿವಶಂಕರ್, ಖಜಾಂಚಿ ಅಬ್ದುಲ್ ರಜಾಕ್ ಹಾಗೂ 18 ಜನರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಉತ್ಪಾದನೆ ಮತ್ತು ಹಣದುಬ್ಬರ

[3ನೇ ಪುಟದಿಂದ]

ಹಣ ದುಬ್ಬರ :

ಬೆಲೆಗಳು ಇಳಿಮುಖವಾಗುತ್ತಿವೆ. ಹಣ ದುಬ್ಬರ ನಿಯಂತ್ರಿಸಲಾಗುತ್ತಿದೆ ಎಂದು ಅರ್ಥ ಸಚಿವ ಪ್ರಣಬ್ ಮುಖರ್ಜಿಯವರು ಘೋಷಿಸುತ್ತಿದ್ದಾರೆ. ಅಂಕೆ ಸಂಖ್ಯೆಗಳ ಡೊಂಬರಾಟದಿಂದ ಅವರು ತಮ್ಮನ್ನು ಸಮರ್ಥಿಸಿ ಕೊಳ್ಳುತ್ತಿದ್ದಾರಾ. ಹೇಗೆ ? ಸಗಟು ಮಾರುಕಟ್ಟೆಯ ಬೆಲೆ ಸೂಚಿ [1970-71 : 100] ಯಲ್ಲಿ ಅಗೋಸ್ಟ್ 84 ರ ಅಂತ್ಯದಲ್ಲಿ 345 ಕ್ಕೇರಿದ್ದು. ಸಪ್ಟೆಂಬರ್ 15 ರಷ್ಟರಲ್ಲಿ ಮೊತ್ತ ಮೊದಲಿಗೆ 340.5 ಕ್ಕೆ ಇಳಿದಿರುವುದೇ ಇದರ ವಾದದ ಆಧಾರ;

ಆದರೆ, ಬೆಲೆ ಇಳಿಸುತ್ತೇವೆ ಎಂದು ಐದು ವರ್ಷಗಳ ಹಿಂದೆ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದಂದಿನಿಂದ ಇಂದಿನವರೆಗೆ ಬೆಲೆಗಳು ಏರುತ್ತಲೇ ಇದ್ದುದನ್ನು ಗಮನಿಸಬೇಕು.

ಗ್ರಾಹಕರ ಬೆಲೆ ಸೂಚಿಗಳು ಏರುತ್ತಲೇ ಇವೆ, ಹಣ ದುಬ್ಬರ ಇಳಿಮುಖವಾಗುವ ಸಂಭವವೇ ಇಲ್ಲ ಎಂದು ಈ ಸಮೀಕ್ಷೆ ತಿಳಿಸುತ್ತದೆ.

ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ 3,70,000 ಕೋಟಿ ಹೊಸ ಬಂಡವಾಳ ಹೂಡುವುದಾಗಿಯೂ, ಅದರಲ್ಲಿ ರೂ 1, 80, 000 ಕೋಟಿ ಸಾರ್ವಜನಿಕ ಕ್ಷೇತ್ರಕ್ಕೆ ಮೀಸಲಾಗಿದೆ ಎಂದೂ ತಿಳಿದು ಬಂದಿದೆ. ಯೋಜನೆಗೆ ಸಂಪನ್ಮೂಲವನ್ನು ಪುನಃ ಅಧಿಕ ತೆರಿಗೆ, ಸಾರ್ವಜನಿಕ ಕ್ಷೇತ್ರದ ಸೇವಾಸೌಲಭ್ಯಗಳಿಗೂ ಕೈಗಾರಿಕಾ ಉತ್ಪಾದನೆಗಳಿಗೂ ಬೆಲೆ ಹೆಚ್ಚಳ, ಕೃತಕ ಹಣ ಸೃಷ್ಟಿ, ವಿದೇಶಿ ಸಾಲ, ಇತ್ಯಾದಿ ಮೂಲಗಳನ್ನೇ ಅವಲಂಬಿಸಲಾಗುವುದರಿಂದ ಮುಂದಿನ ದಿನಗಳಲ್ಲಿ ಬೆಲೆ ಏರಿಕೆ ಹಾಗೂ ಹಣದುಬ್ಬರ ಇನ್ನಷ್ಟೂ ತೀವ್ರಗತಿಯಿಂದ ಹೆಚ್ಚಾಗಲಿವೆ. ಏಳನೇ ಯೋಜನೆಯಲ್ಲಿ ಮೊದಲು ರೂ 40 ಸಾವಿರ ಕೋಟಿ ಕೊರತೆ ಅಂದಾಜು

ಅಸಂಖ್ಯಾತ ಜನಕೋಟಿ ಬಡತನ, ನಿರುದ್ಯೋಗ, ಹಣ ದುಬ್ಬರದ ವಿಪತ್ತುಗಳಿಗೊಳಗಾಗುತ್ತಿರುವುದರಿಂದ :

1. ಉತ್ಪಾದನೆಯು ಜನರ ಅಗತ್ಯತೆಗಳಿಗನುಗುಣವಾಗಿ ಅಭಿವೃದ್ಧಿಯಾಗುವುದಿಲ್ಲ.

2. ಉತ್ಪಾದನಾ ಅಭಿವೃದ್ಧಿಯ ಪ್ರತಿಫಲವು ಜನ ಸಾಮಾನ್ಯರಿಗೆ ನ್ಯಾಯಯುತವಾಗಿ ವಿತರಣೆಯಾಗುವುದಿಲ್ಲ.

3. ಖಾಸಗೀ ಉದ್ಯಮದಲ್ಲಿ ಲಾಭಗಳಿಕೆಯು ಹೆಚ್ಚುತ್ತಿದ್ದರೂ, ಅದಕ್ಕನುಗುಣವಾಗಿ ಬಂಡವಾಳ ಹೂಡುವಿಕೆ, ಉದ್ಯೋಗಾವಕಾಶ, ಉತ್ಪಾದನೆ ಹೆಚ್ಚಾಗುವುದಿಲ್ಲ.

4. ಹೆಚ್ಚಿದ ಉತ್ಪಾದನೆಗನುಗುಣವಾಗಿ ಹಣ ದುಬ್ಬರ ಇಳಿಮುಖವಾಗುವುದಿಲ್ಲ.

5. ರಾಷ್ಟ್ರೀಯ ಸಂಪತ್ತು ತೆರಿಗೆ ತಪ್ಪಿಸಿ ಕಪ್ಪು ಹಣವಾಗುತ್ತಿದೆ. ಭ್ರಷ್ಟಾಚಾರ, ಸುಖ ವೈಭವ, ಪಕ್ಷಾಂತರಕ್ಕೆ ಆಮಿಷ, ಅನುತ್ಪಾದಕ ವಿಷಯಗಳಿಗೆ ಪೋಲಾಗುತ್ತಿದೆ. ಅದು ರಾಷ್ಟ್ರದ ಬಂಡವಾಳವಾಗಿ ಉತ್ಪಾದನೆ. ಉದ್ಯೋಗ, ಆದಾಯ ಹೆಚ್ಚಲು ಸಹಕಾರಿಯಾಗುತ್ತಿಲ್ಲ.

6. ಸ್ವಾವಲಂಬನೆಯ ಗುರಿ ಸಾಧನೆಯಾಗದೆ ವಿದೇಶಿ ಸಾಲದ ಹೊರೆ ಹೆಚ್ಚುವುದು.

ಆದುದರಿಂದ, ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಉತ್ಪಾದನೆ, ಹಣದುಬ್ಬರದಂತಹ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಅಸಾಧ್ಯ.

	ಜನವರಿ 1980,	ಆಗಸ್ಟ 1984,	ಬೆಲೆಹೆಚ್ಚಳ
ಸಗಟು ಮಾರು ಕಟ್ಟೆಯ ಬೆಲೆ ಸೂಚಿ [1970-71 : 100]	227.7	345.0	117.3
ಕೈಗಾರಿಕಾ ಕಾರ್ಮಿಕ ಗ್ರಾಹಕರ ಬೆಲೆ ಸೂಚಿ [1960-61 : 100]	371.0	585.0	214.0

ಕಳೆದ 56 ತಿಂಗಳುಗಳ ಅವಧಿಯಲ್ಲಿ ಸಗಟು ಮಾರುಕಟ್ಟೆಯ ಬೆಲೆಸೂಚಿಯು 117 ಅಂಶಗಳಷ್ಟೂ, ಗ್ರಾಹಕರ ಬೆಲೆ ಸೂಚಿಯು 214 ಅಂಶಗಳಷ್ಟೂ ಹೆಚ್ಚಿದ್ದು, ಈಗ ಸೆಪ್ಟಂಬರ್ ತಿಂಗಳ ಮೊದಲ ಭಾಗದಲ್ಲಿ ಮಾತ್ರ 5.5 ಅಂಶಗಳಷ್ಟು ಸಗಟು ಮಾರುಕಟ್ಟೆಯ ಬೆಲೆ ಸೂಚಯಲ್ಲಿ ಇಳಿಮುಖವಾಗಿರುವುದನ್ನು ಮಹತ್ ಸಾಧನೆ ಎಂದು ಹೇಳಿಕೊಳ್ಳಲಾಗುತ್ತಿದೆ. ಇದು ಕೇವಲ ಚುನಾವಣಾ ಪ್ರಚಾರ, ಚುನಾವಣೆ ಸಮೀಪಿಸುತ್ತಿದ್ದಂತೆ, ಎರಡು ಮೂರು ತಿಂಗಳ ಅವಧಿಯಲ್ಲಾದರೂ ಬೆಲೆಗಳನ್ನು ನಿಯಂತ್ರಿಸಲು ಅಡಿಗೆ ತೈಲ, ಸಕ್ಕರೆ, ಇತ್ಯಾದಿ ಅವಶ್ಯಕವಸ್ತುಗಳನ್ನು ಭಾರೀ ಪ್ರಮಾಣದಲ್ಲಿ ಆಮದು ಮಾಡಿ ಮಾರುಕಟ್ಟೆಗೆ ಬಿಡುಗಡೆ ಮಾಡಿರುವುದರಿಂದಲೇ ಈ ಕೃತಕ ಬೆಲೆ ಇಳಿತ ಕಂಡು ಬರುತ್ತಿರುವುದು !

1983-84 ರ ರಿಸರ್ವ್ ಬ್ಯಾಂಕಿನ ಆರ್ಥಿಕ ಸಮೀಕ್ಷೆಯಂತೆ [ಸಂಡೇ ಅಬ್ಸರ್ ವರ್ : 21.10.84] 1984-85 ರಲ್ಲಿ ಹಣದುಬ್ಬರವು ಹಿಂದಿನ ವರ್ಷಕ್ಕಿಂತ ಶೇ. 9.3 ರಷ್ಟು ಹೆಚ್ಚಾಗಿದೆ ಎಂದು ತಿಳಿದು ಬರುತ್ತದೆ. ಕೃಷಿ ಹಾಗೂ ಕೈಗಾರಿಕಾ ಉತ್ಪನ್ನಗಳ ಬೆಲೆಗಳು ನಿರಂತರವಾಗಿ ಹೆಚ್ಚುತ್ತಿವೆ. ಸಗಟು ಮಾರುಕಟ್ಟೆಯ ಮತ್ತು

ಮಾಡಿದ್ದರೂ. ಈಗ ಕೊರತೆಯ ಮೊತ್ತ ಇದ್ದಕ್ಕಿದ್ದಂತೆ ರೂ 10,000 ಕೋಟಿ ಎಂದು ಮರು ಪರಿಶೀಲಿಸಲಾಗಿದೆ ! ಅಂದರೆ, ರೂ 30000 ಕೋಟಿಯಷ್ಟು ಹೆಚ್ಚಿನ ಅಪ್ರತ್ಯಕ್ಷ ತೆರಿಗೆಗಳನ್ನು ವಿಧಿಸಲಾಗುವುದಲ್ಲದೆ, ಸಾರ್ವಜನಿಕ ಕ್ಷೇತ್ರದ ಸೇವಾಸೌಲಭ್ಯಗಳಿಗೆ ಮತ್ತು ಕೈಗಾರಿಕಾ ಉತ್ಪನ್ನಗಳಿಗೆ ಇನ್ನಷ್ಟು ಬೆಲೆ ಏರಿಸಲಾಗುವುದು. ಚುನಾವಣಾ ಪೂರ್ವದ ಎರಡು ಮೂರು ತಿಂಗಳುಗಳಲ್ಲಿ ಕೃತಕ ಬೆಲೆ ಇಳಿತದ ಮೋಸಗಾರಿಕೆ ಮುಗಿದು ಚುನಾವಣಾ ನಂತರ ಪುನಃ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಇನ್ನಷ್ಟೂ ಏರಿಕೆಯ ದರದಲ್ಲಿ ಹಣದುಬ್ಬರ ಉಂಟಾಗುವುದನ್ನು ಮರೆಯಬಾರದು. ಸಮಾಜವಾದಿ ಚೀನಾದಲ್ಲಿ ಈ ರೀತಿ ನಿರಂತರ ಬೆಲೆ ಏರಿಕೆ ಹಾಗೂ ಹಣದುಬ್ಬರಗಳ ಪೀಡನೆ ಇಲ್ಲ. ಕಾರಣ ಅಲ್ಲಿ ಉತ್ಪಾದಿಸುವವರೇ ವಿತರಣೆಯ ಹಕ್ಕನ್ನೂ ಪಡೆದಿರುತ್ತಾರೆ. ಕಟ್ಟುನಿಟ್ಟಿನ ಆ ಮೂಲಾಗ್ರವಾದ ಯೋಜನೆಯಿಂದ ಬೆಲೆ ನಿಯಂತ್ರಣ ಚೀನಾದಲ್ಲಿ ಯಶಸ್ವಿಯಾಗಿದೆ.

ಬಂಡವಾಳಶಾಹಿ ಆರ್ಥಿಕ ಪದ್ಧತಿಯಲ್ಲಿ ಉತ್ಪಾದನಾ ಸಾಧನ ವಿಧಾನಗಳು ಅಲ್ಪಸಂಖ್ಯಾತ ಶ್ರೀಮಂತ ವರ್ಗದಸ್ವಾಮ್ಯದಲ್ಲಿರುವುದರಿಂದ ಮತ್ತು

ಸಾಮೂಹಿಕ ಸತ್ಯಾಗ್ರಹ

[7ನೇ ಪುಟದಿಂದ]

ಬಂಗೇರ, ಕಾ। ಕೆ. ಪೂವಪ್ಪ ಸಾಲಿಯಾನ್, ಕಾ॥ ಜೆ. ಕೃಷ್ಣಪ್ಪ, ಕಾ॥ ಬಾಬು ದೇವಾಡಿಗ, ಕಾ। ಜೆ. ವೀರಪ್ಪ, ಕಾ॥ ಪಾವೂರು ಬಾಬು, ಕಾ। ರಾಮಚಂದ್ರ ಉಚ್ಚಿಲ ಮೊದಲಾದವರು ಭಾಗವಹಿಸಿದ್ದರು.

ಮನವಿಯನ್ನು ಸ್ವೀಕರಿಸಿದ ಎಕ್ಸಿಕ್ಯೂಟಿವ್ ಇಂಜಿನಿಯರರು ಲೋ-ವೋಲ್ಟೇಜ್ ಸಮಸ್ಯೆಯನ್ನು ನಿವಾರಿಸಲು ಕೂಡಲೇ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ವಿದ್ಯುತ್ ಪೂರೈಕೆಯಲ್ಲಿ ಆಗುತ್ತಿರುವ ಭ್ರಷ್ಟಾಚಾರ ಮತ್ತು ಪಕ್ಷಪಾತದ ಪ್ರಕರಣಗಳ ಕುರಿತು ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿಯೂ ಭರವಸೆ ನೀಡಿದರು.

ನೆರೆದ ಬೃಹತ್ ಜನಸ್ತೋಮವನ್ನು ಉದ್ದೇಶಿಸಿ ಕಾ॥ ಯು. ಜನಾರ್ಧನ ನಾಯಕ್ ಮತ್ತು ಕಾ। ಬಿ. ಮಾಧವರವರು ಮಾತನಾಡಿ, ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಕಾರ್ಮಿಕರನ್ನೂ, ರೈತರನ್ನೂ, ವಿದ್ಯಾರ್ಥಿ, ಯುವಜನ ಮತ್ತು ಇತರ ಕಾರ್ಯಕರ್ತರನ್ನೂ ಅಭಿನಂದಿಸಿದರು.

ಕಾ. ಅರಬಿಂದ ಘೋಷ್ ನಿಧನ

ಸಿ. ಪಿ. ಐ (ಎಂ) ನ ಪ. ಬಂಗಾಳ ರಾಜ್ಯ ಸಮಿತಿ ಸದಸ್ಯರೂ ಮತ್ತು ಪಾರ್ಲಿಮೆಂಟಿನ ರಾಜ್ಯಸಭಾ ಸದಸ್ಯರೂ ಆದ ಕಾ. ಅರಬಿಂದ ಘೋಷ್ ಅವರು ನವೆಂಬರ್ 7 ರಂದು ಕಲ್ಕತ್ತಾದ ಎಸ್. ಎಸ್. ಕೆ. ಎಂ. ಆಸ್ಪತ್ರೆಯಲ್ಲಿ ಮರಣ ಹೊಂದಿದರು. 60 ವರ್ಷ ವಯಸ್ಸಾಗಿದ್ದ ಕಾ. ಅರಬಿಂದ ಘೋಶ್ ಅವರು ಪಶ್ಚಿಮ ಬಂಗಾಳ ರಾಜ್ಯ ಸರಕಾರಿ ನೌಕರರ ಸಮನ್ವಯ ಸಮಿತಿಯ ಸ್ಥಾಪಕ ಸದಸ್ಯರಾಗಿ ಇವರು 30 ವರುಷಗಳ ಕಾಲ ಈ ಸಂಘಟನೆಗೆ ಮುಖಂಡತ್ವ ನೀಡಿದ್ದರು.

ಈಗಿನ ಬಾಂಗ್ಲಾ ದೇಶದಲ್ಲಿರುವ ಗುಲ್‌ನೈಲಾ ಎಂಬಲ್ಲಿ 1925 ರಲ್ಲಿ ಜನಿಸಿದ ಇವರು 1971ರಲ್ಲಿ ಸಿ. ಪಿ. ಐ (ಎಂ) ನ ಪ. ಬಂಗಾಲ ರಾಜ್ಯ ಸಮಿತಿ ಸದಸ್ಯರಾಗಿ ಆಯ್ಕೆಯಾದರು.

ಕಾ. ಘೋಶ್‌ರವರ ನಿಧನಕ್ಕೆ ಪ. ಬಂಗಾಲದ ಮುಖ್ಯ ಮಂತ್ರಿ ಕಾ. ಜ್ಯೋತಿಬಸು ಎಡರಂಗದ ಅಧ್ಯಕ್ಷರಾದ ಕಾ. ಸರೋಜ್ ಮುಖರ್ಜಿ ಮತ್ತಿತರ ಮುಖಂಡರೂ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ.

ಹಾಸನದಲ್ಲಿ ಡಿ. ವೈ. ಎಫ್. ಐ.ನ ವಾರ್ಷಿಕೋತ್ಸವ

ಭಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್‌ನ 4ನೇ ವಾರ್ಷಿಕೋತ್ಸವವು ನವಂಬರ್ 3 ರಂದು ಸಂತೇಪೇಟೆಯಲ್ಲಿರುವ ಕಾಮಧೇನು ಹೋಟಲ್‌ನಲ್ಲಿರುವ ಕಾರ್ಮಿಕ ಕಛೇರಿಯಲ್ಲಿ ನಡೆಯಿತು. ಸಭೆಯಲ್ಲಿ ಕಳೆದ ವರ್ಷದ ಚಟುವಟಿಕೆಗಳನ್ನು ವಿಮರ್ಶಿಸಲಾಯಿತು- ಡಿ. ವೈ. ಎಫ್.ಐ. ನ ಉದ್ದೇಶ. ಹುಟ್ಟು, ಬೆಳವಣಿಗೆಗಳ ಬಗ್ಗೆ ಸಭೆಯಲ್ಲಿ ಸಿ. ರಾಜಶೇಖರ್ ಮಾತನಾಡಿದರು.

ಪ್ರಧಾನಿ ಇಂದಿರಾಗಾಂಧಿಯವರ ಹತ್ಯೆ ಮಾಡಿದ್ದನ್ನು ಸಭೆಯು ಖಂಡಿಸಿತಲ್ಲದೆ ಸಭೆಯಲ್ಲಿ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಸರ್ಕಾರದ ವತಿಯಿಂದ ನೀಡುತ್ತಿರುವ ಸ್ವಯಂ ಉದ್ಯೋಗ ನೆರವಿನ ಸೂಕ್ತ ವಿತರಣೆ. ನಗರದಲ್ಲಿ ಅರ್ಧಕ್ಕೆ ನಿಲ್ಲಿಸಲಾಗಿರುವ ಸ್ಟೇಡಿಯಂ ಕಟ್ಟಡವನ್ನು ಸರ್ಕಾರ ಕೂಡಲೇ ಪೂರ್ತಿಗೊಳಿಸಿ. ಜಿಲ್ಲೆಯ ಆಟಗಾರರಿಗೆ ಪ್ರೋತ್ಸಾಹ ಕೊಡುವುದು.

ನಗರದ ಮಧ್ಯ ಭಾಗದಲ್ಲಿರುವ ಜ್ಯೂಬಿಲಿ ಮೈದಾನವನ್ನು ನಗರಸಭೆಯವರು ನಾಟಕ, ಸರ್ಕಸ್ ಮುಂತಾದವುಗಳಿಗೆ ಅವಕಾಶ ಕೊಡದೆ ಮೈದಾನವನ್ನು ಕೂಡಲೆ ಶುಚಿಗೊಳಿಸಿ ಉತ್ತಮ ಮೈದಾನವನ್ನಾಗಿ ಪರಿವರ್ತಿಸುವುದು.

ನಗರದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಭೀತಿಯ ವಾತಾವರಣವನ್ನು ತಡೆಗಟ್ಟಿ ಶಾಂತಿ ಕಾಪಾಡಿಕೊಂಡು ಬರುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯ ಪ್ರವೃತಿತ್ತರಾಗಬೇಕು.

ಮೇಲಿನ ಎಲ್ಲಾ ಬೇಡಿಕೆಗಳಿಗಾಗಿ ಹೋರಾಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ದೇಶದ ಬಡತನಕ್ಕೆ ಕಾಂಗ್ರೆಸ್ಸೇ ಕಾರಣ

ಇಂದಿರಾ ಕಾಂಗ್ರೆಸ್ ಬಂಡವಾಳಶಾಹಿ-ಭೂಮಾಲಕ ಪರ ಆರ್ಥಿಕ ನೀತಿಯನ್ನನುಸರಿಸುತ್ತಿರುವುದರಿಂದ ನಮ್ಮ ದೇಶದಲ್ಲಿ ಬಡತನ, ನಿರುದ್ಯೋಗಗಳು ತಾಂಡವವಾಡುತ್ತಿವೆಯೆಂದೂ, ಇದರ ನಿವಾರಣೆಯಾಗ ಬೇಕಾದರೆ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲೇ ಬೇಕೆಂದೂ; ದುಡಿಯುವ ಜನತೆ ಒಗ್ಗಟ್ಟಾಗಿ ಜನ ವಿರೋಧಿ ಸರಕಾರದ ವಿರುದ್ಧ ಐಕ್ಯ ಹೋರಾಟ ನಡೆಸಬೇಕೆಂದೂ 17-10-84 ರಂದು ಸಿರ್ಸಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಮುಖಂಡರಾದ ವಿ. ಜೆ. ಕೆ. ನಾಯರ್ ಅವರು ಕರೆ ನೀಡಿದರು. ಕೋಮುವಾದಿ ಮತ್ತು ಛಿದ್ರಕಾರಿ ಶಕ್ತಿಗಳು ದೇಶದ ಐಕ್ಯತೆಯನ್ನು ಮುರಿಯಲು ಪಿತೂರಿ ನಡೆಸಿದ್ದು, ಇವುಗಳನ್ನು ಸೋಲಿಸುವುದು ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯ ಕರ್ತವ್ಯವೆಂದು ಹೇಳಿ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿ ಬೆಳೆಸಲು ಎಲ್ಲರೂ ದುಡಿಯಬೇಕೆಂದು ಕರೆ ನೀಡಿದರು.

ಕಾ॥ ಎಂ.ಎಸ್. ಧಾರೇಶ್ವರ ವಕೀಲರು ಅಧ್ಯಕ್ಷತೆ ವಹಿಸಿದ್ದರು. ಕಾ॥ ಬಂಗಾರೇಶ್ವರ ಸ್ವಾಗತಿಸಿದರು. ಕಾ॥ ಪಿ. ಜಿ. ಮಶಾಲ್ದಿಯವರು ವಂದನಾರ್ಪಣೆ ಸಲ್ಲಿಸಿದರು.

ರಾಜ್ಯ ಸಮಿತಿ ಸಭೆ

ಸಿ.ಐ.ಟಿ.ಯು. ನ ಕರ್ನಾಟಕ ರಾಜ್ಯ ಸಮಿತಿಯ ಸಭೆ ನವೆಂಬರ್ 14 ಮತ್ತು 15 ರಂದು ಮೈಸೂರಿನಲ್ಲಿ ನಡೆಯಲಿದೆ. ಎಲ್ಲಾ ಸದಸ್ಯರೂ ತಪ್ಪದೆ ಸಭೆಗೆ ಹಾಜರಾಗಬೇಕೆಂದು ಸಿ.ಐ.ಟಿ.ಯು. ನ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾ। ಸಿ. ನಂಜುಂಡಪ್ಪ ಅವರು ಕೋರಿದ್ದಾರೆ.

ಅಂತರ್‌ರಾಷ್ಟ್ರೀಯ

ಶಾಂತಿಗಾಗಿ ಬ್ರಿಟನ್ನಿನ ಮಹಿಳೆಯರ ಸತ್ಯಾಗ್ರಹ

ಬ್ರಿಟನ್ನಿನಲ್ಲಿರುವ ಅಮೆರಿಕಾದ ವಾಯು ನೆಲೆ ಗ್ರೀನ್‌ಹಾಮ್ ಕಾಮನ್‌ನ ಮುಂದೆ ಮಹಿಳೆಯರು ಶಾಂತಿಗಾಗಿ ನಡೆಸುತ್ತಿರುವ ಹೋರಾಟ ಅಪೂರ್ವ. ಕಳೆದ ಮೂರು ವರ್ಷಗಳಿಂದ ಬ್ರಿಟಿಷ್ ಪತ್ರಿಕೆ ಹಾಗೂ ಪ್ರಚಾರಮಾಧ್ಯಮಗಳ ಅಪಪ್ರಚಾರ ಮತ್ತು ಪೋಲೀಸರ ಕಿರುಕುಳವನ್ನು ಎದುರಿಸಿ ಗ್ರೀನ್‌ಹಾಮ್‌ನ ಮಹಿಳೆಯರು ಶಾಂತಿಗಾಗಿ ಮತ್ತು ಮಧ್ಯಂತರ ವ್ಯಾಪ್ತಿಯ ನ್ಯೂಕ್ಲಿಯರ್ ಕ್ಷಿಪಣಿಗಳ ನಿರ್ಮೂಲನಕ್ಕಾಗಿ ದೃಢವಾದ ಹೋರಾಟ ನಡೆಸುತ್ತಿದ್ದಾರೆ. ಗ್ರೀನ್‌ಹಾಮ್ ವಾಯು ನೆಲೆಯಲ್ಲಿ ಅಮೆರಿಕಾ ಈಗಾಗಲೇ 16 ಕ್ರೂಯಿಜ್ ಕ್ಷಿಪಣಿಗಳನ್ನು ತಂದಿರಿಸಿದೆ. ಚಳಿಗಾಳಿಗಳನ್ನು ಲೆಕ್ಕಿಸದೆ ಮಹಿಳೆಯರು ಗುಡಾರಗಳನ್ನು ನಿರ್ಮಿಸಿಕೊಂಡು, ಅಲ್ಲೇ ವಾಸಿಸುತ್ತ ಪ್ರತಿ ನಿತ್ಯ ಪ್ರದರ್ಶನಗಳನ್ನು ನಡೆಸುತ್ತಿದ್ದಾರೆ. ಅವರ ಈ ಹೋರಾಟವು ಪ್ರಪಂಚದಾದ್ಯಂತವೂ ನ್ಯೂಕ್ಲಿಯರ್ ಅಸ್ತ್ರಗಳ ವಿರುದ್ಧವಾಗಿ ಹೋರಾಡುತ್ತಿರುವ ಜನತೆಗೆ ಸ್ಫೂರ್ತಿದಾಯಕವಾಗಿದೆ.

ಗ್ರೀನ್‌ಹಾಮ್ ಕಾಮನ್ ವಾಯು ಸೇನಾ ನೆಲೆಯ ಬಳಿ ಹೋರಾಟ ಪ್ರಾರಂಭವಾದದ್ದು 1981 ರ ಸೆಪ್ಟಂಬರ 5 ರಂದು. ತಮ್ಮ ನಾಡಿನಲ್ಲಿರುವ ಅಮೆರಿಕಾದ ಸೈನ್ಯ ನೆಲೆಗಳನ್ನು ತೆಗೆದು ಹಾಕಬೇಕೆಂಬುದಾಗಿ ಅಂದು ಬ್ರಿಟನ್ನಿನ ಶಾಂತಿ ಯೋಧರು ಗ್ರೀನ್ ಹಾಮ್‌ನಲ್ಲಿರುವ ಅಮೆರಿಕಾದ ವಾಯುನೆಲೆಯ ಮುಂದೆ ಪ್ರದರ್ಶನ ನಡೆಸಿದರು. ಅವರು ವಾಯು ನೆಲೆಯ ಪ್ರವೇಶದ್ವಾರಗಳ ಮುಂದೆ ಶಾಂತಿ ಶಿಬಿರಗಳನ್ನು ಸ್ಥಾಪಿಸಿ ಪ್ರದರ್ಶನ ನಡೆಸತೊಡಗಿದರು- ಹಂಗಾಮಿಯಾಗಿ ಸ್ಥಾಪಿಸಿದ ಈ ಶಿಬಿರಗಳು ಖಾಯಂ ಶಿಬಿರವಾಗಿ ಮಾರ್ಪಾಟುಗೊಂಡುವು. ಅಂದಿನಿಂದ, ಬ್ರಿಟನ್ನಿನ ಮಹಿಳೆಯರ ತಂಡಗಳು ಸರದಿಯ ಮೇಲೆ ಈ ಶಿಬಿರಗಳಲ್ಲಿ ನೆಲೆಸಿ ಹೋರಾಟವನ್ನು ಮುಂದುವರಿಸುತ್ತಿವೆ. ಪ್ರಾರಂಭದಲ್ಲಿ ಗ್ರೀನ್‌ಹಾಮ್‌ನಲ್ಲಿ ಮಹಿಳೆಯ ಶಾಂತಿ ಹೋರಾಟಕ್ಕೆ ಯಾರೂ ಹೆಚ್ಚಿನ ಗಮನ ನೀಡಲಿಲ್ಲ. ಆದರೆ ಕಾಲಕ್ರಮೇಣ ಅವರ ಚಳವಳಿಯು ಬೃಹತ್ತಾಗಿ ಬೆಳೆದು ಪ್ರಪಂಚದಾದ್ಯಂತ ಎಲ್ಲರ ಗಮನವನ್ನು ಸೆಳೆದಿದೆ. "ಪುರುಷರು ಮನೆಬಿಟ್ಟು ಯುದ್ಧರಂಗಕ್ಕೆ ಹೊರಡುವುದು ಪರಂಪರೆ. ಇಂದು ಶಾಂತಿಗಾಗಿ ಶ್ರಮಿಸಲು ಮಹಿಳೆಯರು ಹೋಗುತ್ತಿದ್ದಾರೆ" ಗ್ರೀನ್‌ಹಾಮ್ ಮಹಿಳೆಯರು ತಮ್ಮ ಚಳವಳಿಯನ್ನು ಬಣ್ಣಿಸುತ್ತಿರುವುದು ಹೀಗೆ.

ಗ್ರೀನ್‌ಹಾಮ್ ಮಹಿಳೆಯ ಹೋರಾಟವು ಜೀವಿಸುವ ಹಕ್ಕಿಗಾಗಿ, ತಮ್ಮ ಮಕ್ಕಳ ಭವಿಷ್ಯಕ್ಕಾಗಿ ನಡೆಸುತ್ತಿರುವ ಹೋರಾಟವಾಗಿದೆ. "ಮಕ್ಕಳನ್ನು ಬಿಟ್ಟು ಇಲ್ಲಿಗೆ ಬಂದಿರುವ ನಮ್ಮನ್ನು ಕ್ರೂರಿ, ನಿರ್ದಯಿ ಎಂದೆಲ್ಲ ಹೇಳುತ್ತಾರೆ, ಆದರೆ ನಾವು ಈ ಕಾರ್ಯದಲ್ಲಿ ತೊಡಗಿರುವುದು ನಮ್ಮ ಮಕ್ಕಳ ಭವಿಷ್ಯಕ್ಕಾಗಿಯೇ". ಇದು ವಾಯು ನೆಲೆ ಬಳಿ ಇರುವ ಶಿಬಿರಗಳಲ್ಲಿದ್ದು ಕೊಂಡು ಹೋರಾಟ ನಡೆಸುತ್ತಿರುವ ಮಹಿಳೆಯರ ವಾದ. ಗ್ರೀನ್‌ಹಾಮ್‌ನಲ್ಲಿ ನಡೆಯುತ್ತಿರುವ ಮಹಿಳೆಯರ ಈ "ಸತ್ಯಾಗ್ರಹ" ಹೋರಾಟಕ್ಕೆ ಬೆಂಬಲವಾಗಿ ಬ್ರಿಟನ್‌ನಲ್ಲಿ ಬೃಹತ್ ಪ್ರದರ್ಶನಗಳು ನಡೆಯುತ್ತಿವೆ ಅಗಿಂದಾಗ್ಗೆ. 1982 ರ ಡಿಸೆಂಬರ್ 12 ರಂದು 3C0,000 ಮಂದಿ ಮಹಿಳೆಯರು ಗ್ರೀನ್‌ಹಾಮ್ ವಾಯು ನೆಲೆಯನ್ನು ಸುತ್ತುವರಿದು ಪ್ರದರ್ಶನ ನಡೆಸಿದರು. ಹೊಸ ಅಮೆರಿಕನ್ ಕ್ರೂಯಿಜ್ ಕ್ಷಿಪಣಿಗಳನ್ನು ನೆಲೆಗೊಳಿಸುವುದರ ವಿರುದ್ಧವಾಗಿ ಬ್ರಿಟನ್ ಮತ್ತು ಇತರ ಪಶ್ಚಿಮ ಯೂರೋಪಿನ ನಗರಗಳಲ್ಲಿ ಕಳೆದ ವರ್ಷ ಬೃಹತ್ ಪ್ರದರ್ಶನಗಳು ಜರುಗಿದುವು.

ಅಮೆರಿಕದ ಹೆಚ್ಚುತ್ತಿರುವ ದುರಾಕ್ರಮಣಕಾರಿ ನೀತಿ, ವರ್ಧಿಸುತ್ತಿರುವ ಶಸ್ತ್ರಾಸ್ತ್ರ ಪೈಪೋಟಿ, ಸಂಧಾನ ನಡೆಸಲು ನಿರಾಕರಣೆ, ಇವುಗಳ ಇದಿರಿನಲ್ಲಿ, ಶಾಂತಿಗಾಗಿ ಜನತೆಯ ಹೋರಾಟವೊಂದೇ ಆಶಾಕಿರಣ. ಪ್ರಬಲವಾದ ಚಳವಳಿಯು ಸೈನಿಕವಾದಿಗಳನ್ನು ಹಿಮ್ಮೆಟ್ಟಿಸಬಲ್ಲುದಾಗಿದೆ. ಅದು ಸರಕಾರಗಳು ಸಂಧಾನದಲ್ಲಿ ತೊಡಗುವಂತೆ ಒತ್ತಾಯ ತರಬಲ್ಲುದಾಗಿರುತ್ತದೆ ಮತ್ತು ನ್ಯೂಕ್ಲಿಯರ್ ಯುದ್ಧವನ್ನು ತಡೆಯಬಲ್ಲುದಾಗಿರುತ್ತದೆ.

ಕೆಲದಿನಗಳ ಹಿಂದೆ, ಅರ್ಜೆಂಟೈನಾದಲ್ಲಿ ಐದುಸಾವಿರ ಮಂದಿ ಪ್ರದರ್ಶನಕಾರರು ತಮ್ಮ ನಾಡಿನ ಬಂದರಿನಿಂದ ಅಮೆರಿಕಾದ ಯುದ್ಧ ನೌಕೆಗಳು ವಾಪಸ್ಸಾಗುವಂತೆ ಮಾಡಿದರು. ಫಾಕ್‌ಲ್ಯಾಂಡ್ ಯುದ್ಧದಲ್ಲಿ ಅಮೆರಿಕಾ ಬ್ರಿಟನ್‌ಗೆ ನೀಡಿದ ಬೆಂಬಲದ ವಿರುದ್ಧ ಅವರು ಪ್ರದರ್ಶನ ತಡೆಸುತ್ತಿದ್ದರು. ಚಿಲಿಯ ನೌಕಾದಳದೊಂದಿಗೆ ಸಂಯುಕ್ತವಾಗಿ ಕವಾಯತ ನಡೆಸಲು ಆಗಮಿಸಿದ್ದ ಅಮೆರಿಕಾದ ಯುದ್ಧ ನೌಕೆಗಳು ಆಹಾರ ಸಾಮಾನುಗಳನ್ನು ಪಡೆದುಕೊಳ್ಳಲು ಅರ್ಜೆಂಟೈನಾದ ಬಂದರಿಗೆ ಆಗಮಿಸಿದ್ದುವು.

ಅಮೆರಿಕ ಮತ್ತು ಆಸ್ಟ್ರೇಲಿಯಾಗಳೊಂದಿಗೆ ಮಾಡಿಕೊಂಡಿರುವ "ಅಂಜಸ್" ರಕ್ಷಣಾ ಒಪ್ಪಂದದಿಂದ ನ್ಯೂಜಿಲೆಂಡ್ ಹೊರಬರಬೇಕೆಂದೂ ಹಾಗೂ ದೇಶದಲ್ಲಿರುವ ಅಮೆರಿಕಾದ ಸೇನಾ ನೆಲೆಯನ್ನ ವಿಸರ್ಜಿಸಬೇಕೆಂದೂ ಸರಕಾರದ ಮೇಲೆ ಒತ್ತಾಯತರುವುದರಲ್ಲಿ ನ್ಯೂಜಿಲೆಂಡ್‌ನ ಶಾಂತಿ ಚಳುವಳಿಯು ಸಫಲಗೊಂಡಿದೆ. ನ್ಯೂಜಿಲೆಂಡ್‌ನ ಆಡಳಿತ ಪಕ್ಷವು ಸರಕಾರವು ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸುವ ನಿರ್ಣಯವೊಂದನ್ನು ಈಚೆಗೆ ಅನುಮೋದಿಸಿದೆ.

ಈ ಘಟನೆಗಳು ಜನತೆಯ ಚಳವಳಿಯು ಪ್ರಬಲಗೊಂಡರೆ ಸರಕಾರದ ನೀತಿಗಳ ಮೇಲೆ ಪ್ರಭಾವ ಬೀರಲು ಸಾಧ್ಯವೆಂಬುದನ್ನು ತೋರಿಸುತ್ತವೆ. ಶಾಂತಿಗಾಗಿ ಚಳವಳಿಯು ಪ್ರಬಲಗೊಳ್ಳುತ್ತಿರುವಂತೆ ಗ್ರೀನ್ ಹಾಮ್ ಮಹಿಳೆಯರ ಹೋರಾಟವೂ ಹೆಚ್ಚು ಮಹತ್ವಪೂರ್ಣವಾಗುತ್ತಿದೆ.

ಪುಸ್ತಕ ಸ್ವೀಕಾರ

ಜಮಿಲಾ —	ಲೇಖಕರು – ಚಿಂಘೀಜ್ ಐತ್ಮಾತೋವ್ ಪುಟಗಳು–126 ಬೆಲೆ 3 ರೂಪಾಯಿ ರಾದುಗ ಪ್ರಕಾಶನ, ಮಾಸ್ಕೋ
ಮನರಂಜನೆಗಾಗಿ ಭೌತ ಶಾಸ್ತ್ರ —	ಭಾಗ 1 ಲೇಖಕರು – ಯಾಕೋವ್ ಪೆರೆಲ್ಮನ್ ಬೆಲೆ 9
ಮನರಂಜನೆಗಾಗಿ ಭೌತ ಶಾಸ್ತ್ರ —	ಭಾಗ 2 ಲೇಖಕರು : ಯಾಕೋವ್ ಪೆರೆಲ್ಮನ್ ಬೆಲೆ 9
ನಾನೇಕೆ ಅಪ್ಪನಂತೆ—	ಲೇಖಕರು : ಎನ್. ಲುಚ್ನಿಕ್ ಪುಟಗಳು–240, ಬೆಲೆ ರೂ. 9, ಮೇಲಿನ ಮೂರೂ ಪುಸ್ತಕಗಳ ಪ್ರಕಾಶಕರು ಮಿರ್ ಪ್ರಕಾಶನ ಮಾಸ್ಕೋ
ಅದೀನಾ —	ಮೂಲ : ಸದರುದ್ದೀನ್ ಏನಿ, ಹಿಂದಿ ಅನುವಾದ: ರಾಹುಲ ಸಾಂಕೃತ್ಯಾಯನ ಕನ್ನಡಕ್ಕೆ: ಎಂ. ದಸ್ತಗೀರ್, ಪುಟಗಳು 1\C0, ಬೆಲೆ 9
ವಿಜ್ಞಾನದಲ್ಲಿ ವಿನೋದ —	ಲೇಖಕರು : ಎಂ. ಸ್ಟ್ರೊಲ್ಯಾರ್ ಮತ್ತು ಎಲ್ ಪೋಮಿಸ್, ಪುಟಗಳು 84, ಬೆಲೆ 5
ಪ್ರಾಚೀನ ಭಾರತದಲ್ಲಿ ಜನ ಜೀವನ —	ಲೇಖಕರು : ಎಸ್. ಆರ್. ಭಟ್, ಪುಟಗಳು 52, ಬೆಲೆ ರೂ. 3
ಸಮಾಜವಾದವೇ ಏಕೆ ? —	ಪುಟಗಳು 32, ಬೆಲೆ 1-25
ರಾಜ್ಯದ ಕುರಿತು —	ಲೇಖಕರು : ಲೆನಿನ್, ಪುಟಗಳು 28, ಬೆಲೆ 60 ಪೈಸೆ
ಗ್ರಾಮೀಣ ಪ್ರದೇಶಗಳಲ್ಲಿ ವರ್ಗ ಸಂಘರ್ಷ ಮತ್ತು ಜಾತಿ ವೈಷಮ್ಯ—	ಲೇಖಕರು : ಎಸ್. ಜಿ. ಸರ್ದೇಸಾಯಿ ಪುಟಗಳು 68, ಬೆಲೆ ರೂ. 2

ಮೇಲಿನ ಆರೂ ಪುಸ್ತಕಗಳ ಪ್ರಕಾಶಕರು ನವ ಕರ್ನಾಟಕ ಪ್ರಕಾಶನ. ಸುಬೇದಾರ್ ಛತ್ರಂ ರಸ್ತೆ ಬೆಂಗಳೂರು–9

ಸಾಮೂಹಿಕ ಸತ್ಯಾಗ್ರಹ

ಮಂಗಳೂರು ತಾಲೂಕಿನ ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಅಳಪೆ, ಕಂಕನಾಡಿ, ಬಜಾಲ್, ಕಣ್ಣೂರು, ಉಳ್ಳಾಲ, ಪೆರಮನ್ನೂರು, ಮುನ್ನೂರು, ಕೋಟೆಕಾರ್, ತಲಪಾಡಿ ಮೊದಲಾದ ಗ್ರಾಮಗಳಲ್ಲಿ ಕಳೆದ ಎರಡು ವರ್ಷಗಳಿಂದ ಲೋವೋಲ್ಟೇಜ್‌ನಿಂದಾಗಿ ರಾತ್ರಿ 11 ಗಂಟೆಯವರೆಗೂ ಬಲ್ಬುಗಳೂ ಟ್ಯೂಬುಗಳೂ ಉರಿಯದೆ ಜನಸಾಮಾನ್ಯರೂ ವಿದ್ಯಾರ್ಥಿಗಳೂ ಅತೀವ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಗೆ ಊರಿನ ಜನರೂ ಸಂಘ ಸಂಸ್ಥೆಗಳೂ ಎಷ್ಟೋ ಸಲ ಮನವಿಗಳನ್ನು ಅರ್ಪಿಸಿದ್ದರೂ ಅಧಿಕಾರಿಗಳು ತೀರಾ ಅಸಡ್ಡೆಯ ಮತ್ತು ಬೇಜವಾಬ್ದಾರಿತನದ ಮನೋಭಾವವನ್ನು ಪ್ರದರ್ಶಿಸುತ್ತಿದ್ದರು. ಈ ಸಮಸ್ಯೆಯನ್ನು ಕೂಡಲೇ ಬಗೆಹರಿಸುವಂತೆ ಒತ್ತಾಯಿಸಲು ಸಿಪಿಐ [ಎಂ] ಮಂಗಳೂರು ತಾಲೂಕು ಸಮಿತಿಯ ನೇತೃತ್ವದಲ್ಲಿ ಅಕ್ಟೋಬರ್ 26 ರಂದು ಕೆ. ಇ. ಬಿ. ಯ ಎಕ್ಸಿಕ್ಯೂಟಿವ್ ಇಂಜಿನಿಯರರ ಕಚೇರಿಯ ಮುಂದೆ ಸಾಮೂಹಿಕ ಸತ್ಯಾಗ್ರಹ ನಡೆಸಲಾಯಿತು.

ಬೆಳಗ್ಗಿನಿಂದ ಸಂಜೆಯ ತನಕ ನಡೆದ ಈ ಸತ್ಯಾಗ್ರಹದಲ್ಲಿ ಐನೂರಕ್ಕಿಂತಲೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಸಂಜೆ 4 ಗಂಟೆಯ ವೇಳೆಗೆ ಸುಮಾರು ಎರಡು ಸಾವಿರಕ್ಕಿಂತಲೂ ಹೆಚ್ಚು ಕಾರ್ಮಿಕರು ಮೆರವಣಿಗೆಯಲ್ಲಿ ಬಂದು, ಸತ್ಯಾಗ್ರಹಿಗಳೊಡನೆ ಸೇರಿ ಪ್ರದರ್ಶನ ನಡೆಸಿದರು.

ಮಂಗಳೂರು ತಾಲೂಕು ಸಮಿತಿಯ ಕಾರ್ಯದರ್ಶಿ ಕಾ। ಯು. ಜನಾರ್ಧನ ನಾಯಕರ ನೇತೃತ್ವದಲ್ಲಿ ಪಕ್ಷದ ನಿಯೋಗವೊಂದು ಎಕ್ಸಿಕ್ಯೂಟಿವ್ ಇಂಜಿನಿಯರರನ್ನು ಭೇಟಿಯಾಗಿ ಮನವಿಯೊಂದನ್ನು ಅರ್ಪಿಸಿತು. ನಿಯೋಗದಲ್ಲಿ ಪಕ್ಷದ ದ.ಕ. ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾ। ಕೆ. ಆರ್. ಶ್ರೀಯಾನ್, ಕಾ। ಬಿ. ಮಾಧವ, ಕಾ। ಯು.ಬಿ. ಲೋಕಯ್ಯ, ಕಾ। ಕಮಲಾಕ್ಷ

[6ನೇ ಪುಟ ನೋಡಿ]

ಬೀಡಿ ಕಾರ್ಮಿಕರ ಬೃಹತ್ ಮತಪ್ರದರ್ಶನ

ಆಹಾರ ಧಾನ್ಯಗಳ ಮತ್ತಿತರ ಅಗತ್ಯ ವಸ್ತುಗಳ ಬೆಲೆ ದಿನೇ ದಿನೇ ಏರುತ್ತಲಿದ್ದು ಬೀಡಿ ಕಾರ್ಮಿಕರು ಜೀವನ ನಡೆಸುವುದು ದುಸ್ತರವಾಗಿದೆ. ಅವರಿಗೆ ದೊರಕುತ್ತಿರುವ ಕೂಲಿಮತ್ತು ಇತರ ಸೌಲಭ್ಯಗಳು ಸದ್ಯದ ಪರಿಸ್ಥಿತಿ ಸಾಲದೆ ಅತ್ಯಂತ ಕಷ್ಟದಿಂದ ಜೀವಿಸಬೇಕಾಗಿದೆ. ಆದ್ದರಿಂದ ಈ ಕೂಡಲೇ ಕಾರ್ಮಿಕ ಮತ್ತು ಮಾಲೀಕರ ಪ್ರತಿನಿಧಿಗಳ ಸಭೆಯನ್ನು ಕರೆದು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕೆಂದೂ ಮತ್ತು ಕೇಂದ್ರ ಸರಕಾರದವರು ಬಡವರಿಗಾಗಿ 5,000 ರೂಪಾಯಿಗಳವರೆಗೆ ತಮ್ಮ ಕಸಬನ್ನು ಅಭಿವೃದ್ಧಿ ಪಡಿಸಲು ಜಾಮೀನುರಹಿತ ಸಾಲ ಕೊಡುವುದಾಗಿ ದಿನ ಬೆಳಗಾದರೆ ಪ್ರಚಾರ ಮಾಡುತ್ತಲಿದ್ದರೂ ತುಮಕೂರು ಜಿಲ್ಲೆಯ ಬ್ಯಾಂಕ್‌ಗಳ ಮ್ಯಾನೇಜರ್‌ಗಳು ಬಡವರಿಂದ ಅರ್ಜಿಗಳನ್ನು ತೆಗೆದು ಕೊಳ್ಳಲು ನಿರಾಕರಿಸುತ್ತಿದ್ದಾರೆ. ಅರ್ಜಿಗಳನ್ನು ತೆಗೆದುಕೊಂಡಿರುವ ಬ್ಯಾಂಕ್‌ಗಳವರು ಯಾವ ರೀತಿಯ ಸಾಲವನ್ನು ಮಂಜೂರು ಮಾಡುತ್ತಿಲ್ಲ. ಆದ್ದರಿಂದ ಕೂಡಲೇ ಈ ಬಡ ಕಾರ್ಮಿಕರಿಂದ ಅರ್ಜಿಗಳನ್ನು ತೆಗೆದುಕೊಂಡು ಸಾಲವನ್ನು ಹಂಚಲು ನಿರ್ದೇಶನ ನೀಡಬೇಕೆಂದು ಕೋರುವ ಮನವಿ ಪತ್ರವನ್ನು ಅರ್ಪಿಸಲಾಗಿದೆ.

ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಸಭೆಯನ್ನು ಉದ್ದೇಶಿಸಿ ಕಾ॥ ಕೆ. ಆರ್. ನಾಯಕ್, ಹೆಚ್.ಸಿ. ಚನ್ನಪ್ಪರವರು ಮಾತನಾಡಿದರು.

ಮೆರವಣಿಗೆಯ ನೇತೃತ್ವವನ್ನು ಕಾ। ವಜೀರ್. ಪಮಾದ್, ಹಾಜರಾಂಬಿ, ಗೋವಿಂದರಾಜು, ರವೀಂದ್ರನಾಯಕ್ ಮತ್ತಿತರರು ವಹಿಸಿದ್ದರು.

ಸೋವಿಯತ್ ಜನತೆಗೆ ಶುಭಾಶಯಗಳು

(1ನೇ ಪುಟದಿಂದ)

ಹಾಗಿದ್ದರೂ ಕೂಡ ಯೂರೋಪ್ ಖಂಡದಲ್ಲಿ ಪರಿಸ್ಥಿತಿ ಸ್ಫೋಟನಾಯಕವಾಗಿದೆ. ರಷ್ಯಾದೇಶದ ಗಂಡಾಂತರವನ್ನೆದುರಿಸುತ್ತಿದೆ. ಕ್ರೂಸ್ ಮತ್ತು ಪರ್ಶಿಂಗ್ ಅಣ್ವಸ್ತ್ರಗಳನ್ನು ಯೂರೋಪಿನಲ್ಲಿ ಸ್ಥಾಪಿಸಿರುವ ಕೃತಿ ಪ್ರಚೋದನಕಾರಿಯಾಗಿದೆ. ಅಷ್ಟೇ ಅಲ್ಲ ರಷ್ಯಾ ದೇಶದ ಬಾಗಿಲಿಗೆ ಯುದ್ಧ ತಂದಂತಾಗಿವೆ. ತನ್ನ ನಿಲುವೆಯನ್ನೊಪ್ಪುವ ಜಪಾನಿನ ಸರಕಾರದ ಒಪ್ಪಿಗೆಯಿಂದ ಅದೇ ಸಮಯದಲ್ಲಿ ಅಮೆರಿಕದ ಸಾಮ್ರಾಜ್ಯಶಾಹಿಗಳು ಪೂರ್ಣ ದಿಕ್ಕಿನಲ್ಲಿಯೂ ಯುದ್ಧ ತಯಾರಿ ನಡೆಸಿದ್ದಾರೆ.

ರಷ್ಯಾದ ಮೇಲೆ ಆಕ್ರಮಣ ಮಾಡುವ ಅಮೆರಿಕದ ಪ್ರತಿಯೊಂದು ಯೋಜನೆಯನ್ನೂ ವಿಫಲಗೊಳಿಸಲು ಭಾರತ ದೇಶದ ಜನರನ್ನು ತಯಾರಿಗೊಳಿಸುವ ಜವಾಬ್ದಾರಿಯನ್ನು ಸಿ.ಪಿ.ಐ (ಎಂ) ವಹಿಸಿಕೊಳ್ಳುತ್ತದೆ. ಪಶ್ಚಿಮ ಯೂರೋಪಿನಲ್ಲಿ ಅಮೆರಿಕ ಸ್ಥಾಪಿಸಿರುವ ಪರ್ಶಿಂಗ್‌ಮತ್ತು ಕ್ರೂಯಿಸ್ ಅಣ್ವಸ್ತ್ರಗಳನ್ನು ಕೂಡಲೇ ವಾಪಸಪಡೆಯಬೇಕೆಂದೂ, ಮಧ್ಯಂತರ ಅಣ್ವಸ್ತ್ರಗಳನ್ನು ಸೀಮಿತಿಗೊಳಿಸುವ ಕುರಿತು ಜಿನೀವಾದಲ್ಲಿ ಚರ್ಚೆ ಮುಂದುವರಿಸಲು ಸಹಾಯಕವಾಗುವ ಸಲುವಾಗಿ, ಯುರೋಪಿನಲ್ಲಿ ಹೊಸ ಅಣ್ವಸ್ತ್ರ ಕಾಣಿಸದಂತೆ ಮಾಡಬೇಕೆಂದೂನಾವು ಕೇಳಿಕೊಳ್ಳುತ್ತೇವೆ.

ಶಾಂತಿಯು ಪಾಲನೆಯಾಗಬೇಕಾದರೆ ಈಗಿರುವ ಶಸ್ತ್ರಾಸ್ತ್ರಗಳ ಸಮಾನತೆಯನ್ನು ಯಾವುದೇ ಕಾರಣದಿಂದ ಬದಲಾವಣೆ ಮಾಡಬಾರದೆಂಬ ರಷ್ಯಾ ಹಾಗೂ ವಾರ್ಸಾ ಒಪ್ಪಂದದಕ್ಕೆ ನಾವು ಸಹ ಮತರಿದ್ದೇವೆ.

ರಷ್ಯಾ ದೇಶ ತನ್ನ ರಕ್ಷಣೆಯ ಸಲುವಾಗಿ ಕೈಕೊಂಡಿರುವ ಕ್ರಮವನ್ನು ಕೇಂದ್ರ ಸಮಿತಿ ಶ್ಲಾಘಿಸುತ್ತದೆ. ತನ್ನ ಮೇಲೆ ಪ್ರತ್ಯಾಕ್ರಮಣವಾಗುತ್ತದೆಂಬ ಭೀತಿಯಿರದಿದ್ದಲ್ಲಿ ಸಾಮ್ರಾಜ್ಯಶಾಹಿ ಕೊಲೆಗಾರರು ಆಕ್ರಮಣ ಮಾಡಲು ಸದಾ ಸಿದ್ಧರಿದ್ದಾರೆ. ಬಂಡವಾಳಶಾಹಿಗಳ ತಾಂತ್ರಿಕ ಮುಂದುವರಿಕೆಗೆ ಸವಾಲಾಗಿ ತಾನ್ನೂ ತಾಂತ್ರಿಕ ತಯಾರಿಕೆ ಮುಂದುವರಿಸುತ್ತಿರವ ಹಾಗೆಯೇ ಅದರ ಯುದ್ಧ ತಯಾರಿಯನ್ನೆದುರಿಸಲು ತಾನೂ ರಕ್ಷಣಾ ಕ್ರಮ ಕೈಗೊಳ್ಳುವ ಶಕ್ತಿ ಸಮತಾವಾದಿ ಜಗತ್ತಿಗಿರುವುದನ್ನು ಕಂಡು ಜನತೆಗೆ ಸಮಾಧಾನವಾಗಿದೆ ಮತ್ತು ಧೈರ್ಯ ತುಂಬುವಂಥದ್ದಾಗಿದೆ. ತನ್ನನ್ನು ರಕ್ಷಿಸಿಕೊಳ್ಳುವ ಮೂಲಕ ಸೋವಿಯತ್ ರಷ್ಯಾ ಎಲ್ಲಾ ಜನರ ಸ್ವಾತಂತ್ರ್ಯವನ್ನು ರಕ್ಷಿಸುತ್ತದೆ. ಸಮತಾವಾದಿ ದೇಶದ ಯಶಸ್ವಿ ರಕ್ಷಣೆಯು ಯಾವಾಗಲೂ ವಿಮೋಚನಾ ಪರಿಣಾಮಗಳನ್ನು ಹೊಂದಿರುತ್ತದೆ.

ತನ್ನಲ್ಲಿ ಸಾಕಷ್ಟು ಪತ್ರಾಗಾರದ ಶಕ್ತಿಯಿಂದೆಂದೂ, ಅಮೆರಿಕ ಕೂಡ ಅದರ ಪರಿಣಾಮದಿಂದ ಬಚಾವಾಗಲಾರದೆಂಬ ಎಚ್ಚರಿಕೆಯನ್ನು ಸಾಮ್ರಾಜ್ಯಶಾಹಿಗಳಿಗೆ ರಷ್ಯಾದೇಶನೀಡಿದೆ.ಅನಾವಶ್ಯಕವಾದಕೊಲೆಮತ್ತು ನಾಶವನ್ನು ತಡೆಯುವ ಸಲುವಾಗಿ ಇತ್ತ ಈ ಎಚ್ಚರಿಕೆ ಸಾಮ್ರಾಜ್ಯಶಾಹಿಗಳ ಪ್ರಚಾರದಿಂದಾಗಿ ಉಂಟಾಗಿರುವ ಆತ್ಮ ಸಂತುಷ್ಟಿ ಮನೋಭಾವವನ್ನು ಎದುರಿಸಲಿಕ್ಕೆ ಮತ್ತು ತಮ್ಮ ಪ್ರಯತ್ನವನ್ನು ಇಮ್ಮಡಿಗೊಳಿಸಲಿಕ್ಕೆ ಶಾಂತಿಗಾಗಿ ಹೋರಾಡುವವರಿಗೆ ಸಹಾಯಕವಾಗುತ್ತದೆ.

ಶಾಂತಿಗಾಗಿರುವ ತನ್ನಿಚ್ಛೆ ಹಾಗೂ ಯುದ್ಧವನ್ನೆದುರಿಸಲಿರುವ ಸಿದ್ಧತೆಗಳು ಅಮೆರಿಕ ಸಾಮ್ರಾಜ್ಯಶಾಹಿಗಳ ಯುದ್ಧ ಖೋರ ನೀತಿಯನ್ನು ಮಣ್ಣು ಮುಕ್ಕಿಸುತ್ತವೆಂದು ಆಶಿಸುತ್ತೇವೆ.

ನಿಧನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಮಂಗಳೂರು ತಾಲ್ಲೂಕು ಸೋಮೇಶ್ವರ ಗ್ರಾಮದ ಕುಂಪಲ ಶಾಖೆಯ ಸದಸ್ಯರಾದ ರಘುನ್ಯಾಕ್ ಎಂಬುವರು ತಾ|| 29—10—84 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಕುಟುಂಬದವರ ದುಃಖದಲ್ಲಿ ಕುಂಪಾಲ ಶಾಖೆಯ ಸದಸ್ಯರೂ ಅನುತಾಪ ವ್ಯಕ್ತಪಡಿಸಿ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ನಿರಪರಾಧಿ ಜನರ ಹತ್ಯಾಕಾಂಡ ನಿಲ್ಲಲಿ

[1ನೇ ಪುಟದಿಂದ]

ಜನ ಸಂದಣಿಯಲ್ಲಿ, ಇಂದಿರಾಗಾಂಧಿ ರಕ್ಷಣಾ ಕವಚ ಧರಿಸಿಲ್ಲ, ಒಬ್ಬಾಕೆನೇ ಟಿ. ವಿ. ಸಂದರ್ಶನಕ್ಕೆ ಹೋಗುತ್ತಾಳೆ ಎಂಬ ವಿಷಯವನ್ನೆಲ್ಲ ತಿಳಿದೇ ಕೊಲೆಯ ಯೋಜನೆ ತಯಾರಿಸಲಾಗಿದೆ. ಸತ್‌ವಂತ್‌ಸಿಂಗ್ ರಜೆಯಲ್ಲಿದ್ದಾಗ ಈ ಸಂಚು ತಯಾರಾಗಿರಬೇಕು. ಸತ್‌ವಂತಸಿಂಗ್ ಅದೇ ದಿವಸ ಕೆಲಸದ ವೇಳೆ ಬದಲಾಯಿಸಿದ. ತನಗೆ ಭೇದಿಯ ಭಾದೆ ಇರುವುದರಿಂದ ಪ್ರಧಾನ ಮಂತ್ರಿಯ ನಿವಾಸದಲ್ಲೇ ಡ್ಯೂಟಿ ಬೇಕೆಂದು ಕೇಳಿದ. ಸಾಧಾರಣ ಪರಿಸ್ಥಿತಿಯಲ್ಲಿ ಯಾರಿಗೂ ಸಂಶಯ ಬರುವ ಸಾಧ್ಯತೆಯಿಲ್ಲ. ಬೀಯಾಂತ್‌ಸಿಂಗನನ್ನು ಕೂಡಲೇ ಕೊಲೆ ಮಾಡಲಾಯಿತು. ಸತ್‌ವಂತ್‌ಸಿಂಗ್ ಸಾವಿನ ದವಡೆಯಲ್ಲಿದ್ದಾನೆ. ಇವರಿಬ್ಬರೂ ಗುಂಡು ಹಾರಿಸಿದ ನಂತರತಪ್ಪಿಸಿಕೊಳ್ಳುವ ಪ್ರಯತ್ನ ಮಾಡಲಿಲ್ಲ. ಇಂಡೋಟಿಬೇಟಿಯನ್ ಗಾರ್ಡ್ ಇವರಿಬ್ಬರನ್ನೂ ಕೊಲ್ಲಲು ಗುಂಡು ಹಾರಿಸಿದ. ಬೀಯಾಂತ್‌ಸಿಂಗ್ ಗುಂಡಿಗೆ ಬಲಿಯಾದ, ಸತ್‌ವಂತ್‌ಸಿಂಗ್ ಮರಣಶಯ್ಯೆಯಲ್ಲಿದ್ದಾನೆ.

ಆ ದಿನದ ಇಂದಿರಾ ಗಾಂಧಿಯ ಕಾರ್ಯಕ್ರಮದ ಪೂರ್ಣ ಮಾಹಿತ ಪಡೆದೇ ಈ ಒಳಸಂಚು ನಡೆದಿತ್ತು. ಅಮೇರಿಕದ ಗುಪ್ತಚಾರ ದಳದವರು ಇತರ ದೇಶಗಳಲ್ಲಿ ನಡೆಸುವ ರೀತಿಯಲ್ಲಿಯೇ ದಿಲ್ಲಿಯಲ್ಲಿಯೂ ಸಂಚು ತಯಾರಿಸಲಾಗಿತ್ತು. ಈ ಕೊಲೆಯ ನಿಜಸಂಗತಿಗಳು ಹೊರಬೀಳಬಾರದೆಂಬ ದುರುದ್ದೇಶದಿಂದಲೇ ಹಂತಕರ ಕೊಲೆ ಮಾಡಲಾಯಿತು.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹೇಳಿದಂತೆಯೇ ಸೋವಿಯತ್ ಕಮ್ಯುನಿಸ್ಟ್ ಪಾರ್ಟಿ ಕೂಡ ಇಂದಿರಾ ಹತ್ಯೆಯಲ್ಲಿ ಅಮೇರಿಕದ ಗುಪ್ತಚಾರ ದಳದ ಕೈವಾಡವಿದೆಂಬ ಸಂಶಯ ವ್ಯಕ್ತ ಮಾಡಿದೆ. ಅದಕ್ಕೆ ಕಾರಣ ಕೂಡ ಕೊಟ್ಟಿದೆ. ಇಂಡೋ ಚೀನಾದಲ್ಲಿ ಅಮೇರಿಕದ ಕೈವಾಡ, ಇಸ್ರೈಲ್ ದಾಳಿಯ ವಿರುದ್ಧ ಅರಬ ರಾಷ್ಟ್ರಗಳಿಗೆ ಬೆಂಬಲ, ಭಾರತ ಸಮುದ್ರ ಶಾಂತಿ ನೆಲೆಯಾಗಿರಬೇಕೆಂಬ ಒತ್ತಾಯ, ಅಫಘಾನಿಸ್ಥಾನದ ಸಮಸ್ಯೆಗೆ ವಾಸ್ತವಿಕ ನಿಲುವು ತಾಳಬೇಕೆಂಬ ಒತ್ತಾಯ, ಹಾಗೂ ಕಂಪೂಚಿಯಾದ ನ್ಯಾಯಬದ್ಧ ಸರಕಾರಕ್ಕೆ ಮನ್ನಣೆ ಈ ಕಾರಣಗಳಿಂದಾಗಿ ಭಾರತದ ಶತ್ರುಗಳು ಅಸಮಾಧಾನ ಗೊಂಡಿದ್ದರೆಂದು ಸೋವಿಯತ್ ಕಮ್ಯುನಿಸ್ಟ್ ಪಾರ್ಟಿಯ ಮುಖಪತ್ರ "ಪ್ರಾವ್ದಾ" ಪ್ರಕಟಿಸಿದೆ. ಭಾರತ ಅನುಸರಿಸುತ್ತಿದ್ದ ಸ್ವತಂತ್ರ ವಿದೇಶಿ ಧೋರಣೆಯಿಂದ ಇವರು ಅಸಮಾಧಾನ ಗೊಂಡಿದ್ದಾರೆಂದೂ, ಸೀಖ್ ಮತ್ತಿನ್ನಿತರ ತೀವ್ರಗಾಮಿಗಳಿಗೆ ಹಣ ಸಹಾಯ ಮಾಡುತ್ತಿದ್ದರೆಂದೂ ಅದು ಆರೋಪಿಸಿದೆ.

ಇದಕ್ಕೆ ಕಾರಣವಿಲ್ಲದಿಲ್ಲ ಇಂಗ್ಲೆಂಡಿನಲ್ಲಿರುವ ಖಲಿಸ್ತಾನ ಪರ ಸಿಖ್ ಜನರು ಸಿಹಿ ತಿಂಡಿ ಹಂಚಿ ವಿಜಯೋತ್ಸವ ಆಚರಿಸಿದಾಗ ಖಲಿಸ್ತಾದ ರಾಜ್ಯದ ಮುಖ್ಯಮಂತ್ರಿಯೆಂದು ಮೆರೆಯುತ್ತಿರುವ ಡಾ. ಜಗಜಿತ ಸಿಂಗ್ ಚೌಹಾನ್ ಅವರು "ಇಂದಿರಾಗಾಂಧಿಯನ್ನು ಮುಗಿಸಿದ್ದೇವೆ. ನಮ್ಮ ಮುಂದಿನ ಗುರಿ ರಾಜೀವಗಾಂಧಿ" ಎಂದು ಬಹಿರಂಗವಾಗಿಯೇ ಹೇಳಿಕೆ ನೀಡಿ ಕುಣಿದಾಡಿದ ಚಿತ್ರ ಬ್ರಿಟಿಷ್ ಟಿ. ವಿ. ಯಲ್ಲಿ ಪ್ರದರ್ಶನವಾಗಿದೆ. ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇಂಗ್ಲೆಂಡಿನ ಶ್ರೀಮತಿ ಥ್ಯಾಚರ್ ಸರಕಾರ ಅಂಥ ಉಗ್ರವಾದಿಗಳ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಭಾರತವನ್ನು ಛಿದ್ರಗೊಳಿಸಿ ದುರ್ಬಲಗೊಳಿಸುವ ಹೊಂಚಿನಲ್ಲಿದ್ದಾರೆ. ಸಾಮ್ರಾಜ್ಯಶಾಹಿಗಳು ಎಂಬ ಆರೋಪಕ್ಕೆ ಇದು ಪುಷ್ಟಿ ನೀಡುತ್ತಿಲ್ಲವೆ ?

ಸಾಮ್ರಾಜ್ಯಶಾಹಿಗಳ ಅಂತರರಾಷ್ಟ್ರೀಯ ಒಳ ಸಂಚಿನ ಕುರಿತು ತುರ್ತಾಗಿ ವಿಚಾರಣೆ ನಡೆಸಿ ಸರಿಯಾದ ಕ್ರಮಕೈಗೊಂಡು ದೇಶದ ಸಮಗ್ರತೆಯನ್ನುಳಿಸಲು ರಾಜೀವ ಸರಕಾರ ಯೋಗ್ಯ ಕ್ರಮ ಕೈಗೊಳ್ಳುವುದು ಅತ್ಯಗತ್ಯ

ದಿಲ್ಲಿಯಲ್ಲಿ ಆಡಳಿತೆಯ ಕುಸಿತ

ಇಂದಿರಾಗಾಂಧಿಯ ಹತ್ಯೆಯಲ್ಲಿ ಉಚ್ಚಮಟ್ಟದ ಮೇಲಧಿಕಾರಿಗಳ ಕೈವಾಡವಿತ್ತೇ ಎಂಬ ಸಂಶಯಕ್ಕೆ 4 ದಿವಸ ದಿಲ್ಲಿ ಆಡಳಿತ ಕುಸಿದುಬಿದ್ದಿರುವುದು ಒಂದು ಕಾರಣವಾಗಬಹುದೇ?

1947ರಲ್ಲಿ ಭಾರತ-ಪಾಕಿಸ್ತಾನ ರಚನೆಯಾದಾಗ ಹಿಂದೂ-ಮುಸ್ಲಿ ಹತ್ಯೆ, 1948ರಲ್ಲಿ ಗಾಂಧಿಯಕೊಲೆಯಾದಾಗ ಬ್ರಾಹ್ಮಣರ ಮೇಲೆ ನಡೆದ ಹತ್ಯಾಕಾಂಡಗಳ ಪಾಠವನ್ನು ದಿಲ್ಲಿ ಆಡಳಿತೆ ನೆನಪಿಸಿಕೊಂಡಂತೆ ಕಂಡುಬಂದುಬರುವುದಿಲ್ಲ, ಇಂದಿರಾಗಾಂಧಿಯ ಹತ್ಯೆ ಸಿಖ್‌ರಿಂದ ನಡೆಯಿತೆಂಬ ಸುದ್ದಿ ಹಬ್ಬಿದ ಕೂಡಲೇ ಸಿಖ್ ಜನಾಂಗದ ಮೇಲೆ ಅತ್ಯಾಚಾರ ನಡೆಯುತ್ತದೆ. ನಿರಪರಾಧಿ ಜನ ಹೆಂಗಸರು—ಮಕ್ಕಳು ಆಸ್ತಿ ಪಾಸ್ತಿಗಳೆಲ್ಲ ಜನರ ಸಿಟ್ಟಿನ ವಿಕೋಪಕ್ಕೆ ತುತ್ತಾಗುತ್ತವೆಂಬ ಅಂಶವನ್ನು ತಿಳಿದುಕೊಳ್ಳುವ ಶಕ್ತಿ ಕೇಂದ್ರ ಮಂತ್ರಿಗಳಿಗೂ, ದಿಲ್ಲಿಯ ಅಧಿಕಾರಿಗಳಿಗೂ ತಿಳಿದಿರಲಿಲ್ಲವೇ ? ನಿರಪರಾಧಿ ಸಿಖ್‌ರನ್ನು ರಕ್ಷಿಸುವ ಸಲುವಾಗಿ ಬರೀ ಪೊಲೀಸರಿಂದಲೇ ಸಾಧ್ಯವಿಲ್ಲ, ಸೈನಿಕರೂ ಬೇಕೆಂಬ ವಿಚಾರವೂ ಯಾರಿಗೂ ಹೊಳೆಯಲಿಲ್ಲವೇ? ನಮ್ಮ ದೇಶದಲ್ಲಿ 1 ಮಿಲಿಯ ಸೈನಿಕರು, 5 ಲಕ್ಷ ಅರೆ ಸೈನಿಕರೂ ಇರುವಾಗ, ಗಂಡಾಂತರ ಪರಿಸ್ಥಿತಿಯಲ್ಲಿ ಜನರ ರಕ್ಷಣೆಗಾಗಿ ಅವರಸೇವೆ ಲಭ್ಯವಾಗುವಂತೆ ಮಾಡುವ ದೂರದೃಷ್ಟಿ ಯಾರಿಗೂ ಹೊಳೆಯಲಿಲ್ಲವೇ ?

ಪೊಲೀಸರ, ಪೊಲೀಸ್ ಅಧಿಕಾರಿಗಳ ಸಮಕ್ಷಮವೇ ಕೊಲೆ, ಸುಲಿಗೆ, ದೊಂಬಿ ನಡೆಯಿತೆಂದೂ, ಪೊಲೀಸ್ ಸ್ಟೇಷನಿಗೆ ಟೆಲಿಫೋನ್ ಮಾಡಿದರೂ ಯಾವುದೇ ಪ್ರತಿಕ್ರಿಯೆ ಇರಲಿಲ್ಲವೆಂದೂ ಸಮಕ್ಷಮ ರಕ್ಷಣೆ ಬೇಡಿದರೂ ಸಹಾಯ ದೊರೆತ್ತಿಲ್ಲವೆಂದೂ ಪತ್ಯಕ್ಷದರ್ಶಿಗಳ ವರದಿ ಪ್ರಕಟವಾಗಿವೆ. ನಾಲ್ಕು ದಿವಸಗಳಲ್ಲಿ ಇಷ್ಟೆಲ್ಲಾ ಜನ ಸತ್ತಿದ್ದಾರೆ, ಹೆಚ್ಚು ಹಾನಿಯಾಗಿದೆಂಬ ವಿಷಯದಲ್ಲಿ ದಿಲ್ಲಿಯ ಪೊಲೀಸರ ಅಧಿಕಾರಿಗಳು ತಪ್ಪು ಅಂಕೆ-ಸಂಖ್ಯೆ ಕೊಡುತ್ತಿದ್ದರೆಂದೂ, ಪರಿಸ್ಥಿತಿ ಹತೋಟಿಯಲ್ಲಿದೆಂಬ ಸುದ್ಧಿಯನ್ನು ಪ್ರಕಟಿಸುತ್ತಿದ್ದರೆಂಬ ಆರೋಪ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದು ಬಹಳ ಅಪಾಯಕಾರಿ ಪಶ್ಚಿಮ ಬಂಗಾಳದಲ್ಲಿಯ ಪರಿಸ್ಥಿತಿಯನ್ನು ಒಂದೇ ದಿವಸದಲ್ಲಿ ಸಾಮಾನ್ಯಸ್ಥಿತಿಗೆ ತರಲು ಜ್ಯೋತಿಬಸು ಸರಕಾರಕ್ಕೆ ಸಾಧ್ಯವಾದಾಗ, ಕಾಂಗ್ರೆ ಆಡಳಿತೆ ಇರುವಲ್ಲೆಲ್ಲ !(ಹರಿಯಾಣ-ಪಂಜಾಬಗಳ ಸುದ್ದಿಯೇ ಪ್ರಕಟವಾಗುತ್ತಿಲ್ಲ) ಹತ್ಯಾಕಾಂಡ — ಹಿಂಸಾಚಾರಗಳು ಮುಂದುವರಿದಿರುವ ಸಂಗತಿ ನಾಚಿಕೆಗೇಡಿತನವಷ್ಟೆ ಅಲ್ಲ ಗಂಡಾಂತರಕಾರಿ ಕೂಡ ಎಂಬುದನ್ನು ಮರೆಯಬಾರದು.

ಕಮ್ಯೂನಿಸ್ಟ್ ಪಕ್ಷಗಳ, ಇತರ ಪ್ರಜಾಪ್ರಭುತ್ವ ಶಕ್ತಿಗಳ ಸತತ ಪ್ರಯತ್ನ ಹೋರಾಟಗಳಿಂದಾಗಿ ಭಾರತ ದೇಶದಲ್ಲಿ ಪ್ರಜಾಪ್ರಭುತ್ವ ಶಕ್ತಿ ಬಲಿಷ್ಟವಾಗಿ ಜಾಗೃತವಾಗಿರುವುರಿಂದಲೇ ಬಾಹ್ಯ ಶಕ್ತಿಗಳ ಕೈವಾಡವಾಗಲೀ ಅಂಥವರ ಬೆಂಬಲದಿಂದ ದೇಶದಲ್ಲಿ ಗೊಂದಲ ಎಬ್ಬಿಸುತ್ತಿರುವ ಮತೀಯ, ಧರ್ಮೀಯ, ಛಿದ್ರ ಕಾರಿ ಶಕ್ತಿಗಳ ಒಳಸಂಚು ಸಫಲವಾಗಿ ಸಾರ್ವಭೌಮತ್ವವನ್ನೂ ಐಕ್ಯತೆಯನ್ನೂ ಇಂಥ ಸಂಧಿಗ್ದ ಪರಿಸ್ಥಿತಿಯಲ್ಲಿ ಉಳಿಸಿಕೊಳ್ಳಲು ಸಾಧ್ಯವಾಗಿವೆ. ಬೇರೆ ಯಾವ ದೇಶದಲ್ಲೇ ಆಗಲಿ ಇಂದಿರಾ ಹತ್ಯೆಯ ನಂತರ ದಿಲ್ಲಿಯಲ್ಲಿ ಆಡಳಿತೆ ಸಂಪೂರ್ಣವಾಗಿ ಕುಸಿದುಬಿದಂಥ ಸಂದರ್ಭ ಉಂಟಾಗಿದ್ದರೆ ಸಾಮ್ರಾಜ್ಯಶಾಹಿ ಏಜಂಟರು ವಿಭಜನಕಾರಿಗಳು ದೇಶವನ್ನು ವಿದೇಶಿ ಸಾಮ್ರಾಜ್ಯಶಾಹಿಗಳಿಗೊಪ್ಪಿಸುವಂಥ ಘಾತುಕ ಒಳಸಂಚಿಗೆ ಜಯ ಸಿಗುತ್ತಿತ್ತೆಂಬುದರಲ್ಲಿ ಸಂಶಯವಿಲ್ಲ.

ಇಂಥ ಘಾತುಕ ಶಕ್ತಿಗಳನ್ನು ಗುರುತಿಸಿ, ಅವರನ್ನು ಪ್ರತ್ಯೇಕಿಸಿ ನಾಶ ಮಾಡುವ ಉಗ್ರ ಚಳುವಳಿಯನ್ನು ದೇಶದ ಜನತೆ ಹಾಗೆಯೇ ರಾಜೀವ ಸರಕಾರ ಮಾಡಬೇಕಾದ್ದು ಇಂದಿನ ಪರಿಸ್ಥಿತಿಯಲ್ಲಿ ಆದ್ಯ ಕರ್ತವ್ಯವಾಗಿದೆ.

– ಎಂ.ಕೆ. ಉಪಾಧ್ಯಾಯ

Printed & Published by P Ramachandra Rao by him on behalf of the Communist Party of India (Marxist) Karnataka State Committee, K. V. Temple Street, Sultanpet, Bangalore-560052 Editoral and managerial office, L-56, K V. Temple Street, Sultanpet. B-53 Phone : 24154

Editor ; P. Ramachandra Rao Managing Editor : N. K. Upadhyaya